ಸಂಪುಟ 01 | ಸಂಚಿಕೆ 140 | ಸೋಮವಾರ 10 ಆಗಸ್ಟ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಅಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ವಿಶ್ವ ಸಿಂಹ ದಿನ (World Lion Day)
ಆಗಸ್ಟ್ 10ರಂದು ವಿಶ್ವ ಸಿಂಹ ದಿನವನ್ನು ಆಚ-ರಿಸಲಾಗುತ್ತದೆ. ಸಿಂಹಗಳ ಸಂರಕ್ಷಣೆ, ಅವುಗಳ ಆವಾಸಸ್ಥಾನಗಳ ರಕ್ಷಣೆ ಹಾಗೂ ವನ್ಯಜೀವಿ ಸಂರಕ್ಷಣೆಯ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವುದು ಈ ದಿನದ ಉದ್ದೇಶ.

2) ವಿಶ್ವ ಜೈವಿಕ ಇಂಧನ ದಿನ (World Biofuel Day): ಪಳೆಯುಳಿಕೆ ಇಂಧನಗಳಿಗೆ ಪರ್ಯಾಯವಾಗಿ ಜೈವಿಕ ಇಂಧನ ಬಳಕೆಯ ಬಗ್ಗೆ ಜಾಗೃತಿ ಮೂಡಿಸಲು ಆಚರಿಸಲಾಗುತ್ತದೆ.

## ಸುಭಾಷಿತ

"ಒಂದು ಗುರಿಯನ್ನು ಹಿಡಿದುಕೊಳ್ಳಿ. ಆ ಗುರಿಯನ್ನೇ ನಿಮ್ಮ ಜೀವನದ ಧ್ಯೇಯವನ್ನಾಗಿ ಮಾಡಿಕೊಳ್ಳಿ."

– ಸ್ವಾಮಿ ವಿವೇಕಾನಂದ

# ಪತ್ರಿಕಾ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಳ್ಳಬಾರದು: ಸಿದ್ದರಾಮಯ್ಯ

❑ ನೈಜ್ಯ ದೆಸೆ ನ್ಯೂಸ್



ಬೆಂಗಳೂರು: ಪತ್ರಿಕಾ ಸ್ವಾತಂತ್ರ್ಯವನ್ನು ಯಾವುದೇ ಕಾರಣಕ್ಕೂ ದುರುಪಯೋಗಪಡಿಸಿಕೊಳ್ಳದೆ, ಸಂವಿಧಾನದ ಆಶಯಗಳಿಗೆ ಅನುಗುಣವಾಗಿ ಜವಾಬ್ದಾರಿಯಿಂದ ಬಳಸಬೇಕು ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.ಖಾದ್ರಿ ಶಾಮಣ್ಣ ಟ್ರಸ್ಟ್ ವತಿಯಿಂದ ಶೇಷಾದ್ರಿಪುರಂ ಕಾಲೇಜಿನ ಸಮ್ಮೇಳನ ಸಭಾಂಗಣದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಭಾಗವಹಿಸಿ, ಖಾದ್ರಿ ಶಾಮಣ್ಣ ಅವರ ಹೆಸರಿನಲ್ಲಿ ಪ್ರತಿವರ್ಷ ನೀಡಲಾಗುವ ಪತ್ರಿಕೋದ್ಯಮ ಪ್ರಶಸ್ತಿಯನ್ನು ಪ್ರಜಾವಾಣಿಯ ನಿವೃತ್ತ ಸಹಾಯಕ ಸಂಪಾದಕ ಉದಯಕುಮಾರ್ ಅವರಿಗೆ ಪ್ರದಾನ ಮಾಡಿ ಅವರು ಮಾತನಾಡಿದರು.ಪ್ರತಿಯೊಬ್ಬರೂ ಸಂವಿಧಾನದ ಬಗ್ಗೆ ತಿಳಿದುಕೊಳ್ಳುವುದು ಅಗತ್ಯ. ಅದರಲ್ಲೂ ಪತ್ರಿಕೋದ್ಯಮದಲ್ಲಿರುವವರು ಸಂವಿಧಾನ ಮತ್ತು ಅದರ ಆಶಯಗಳನ್ನು ಅರಿತುಕೊಳ್ಳುವುದು ಅತ್ಯಂತ ಮುಖ್ಯ. ಸಂವಿಧಾನ ನೀಡಿರುವ ಸ್ವಾತಂತ್ರ್ಯವನ್ನು ಸರಿಯಾದ ರೀತಿಯಲ್ಲಿ ಬಳಸಿದಾಗ ಮಾತ್ರ ಪ್ರಜಾಪ್ರಭುತ್ವದ ಆಶಯಗಳನ್ನು ಸಾಕಾರಗೊಳಿಸಲು ಸಾಧ್ಯ ಎಂದು ಹೇಳಿದರು.ಪತ್ರಿಕೋದ್ಯಮವು ಪ್ರಜಾಪ್ರಭುತ್ವದ ಜೀವಾಳವಾಗಿದ್ದು, ಸಮಾಜದಲ್ಲಿರುವ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಅಸಮಾನತೆಗಳನ್ನು ನಿವಾರಿಸುವಲ್ಲಿ ಪತ್ರಕರ್ತರ ಪಾತ್ರ ಮಹತ್ವದ್ದಾಗಿದೆ. ಬಡವರು, ಮಹಿಳೆಯರು, ಹಿಂದುಳಿದವರು, ರೈತರು ಹಾಗೂ ಅಲ್ಪಸಂಖ್ಯಾತರು ಸೇರಿದಂತೆ ಶೋಷಿತ ವರ್ಗಗಳ ಧ್ವನಿಯಾಗಿ ಮಾಧ್ಯಮಗಳು ಕಾರ್ಯನಿರ್ವಹಿಸಬೇಕು ಎಂದರು.ಇತ್ತೀಚಿನ ದಿನಗಳಲ್ಲಿ ಪತ್ರಿಕೋದ್ಯಮದ ಸ್ವರೂಪ ಬದಲಾಗುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ ಅವರು, ಕೆಲವು ಮಾಧ್ಯಮ ಸಂಸ್ಥೆಗಳು ಪತ್ರಿಕೋದ್ಯಮದ ಮೌಲ್ಯಗಳನ್ನು ಎತ್ತಿಹಿಡಿಯುವಲ್ಲಿ ವಿಫಲವಾಗುತ್ತಿವೆ ಎಂದು ಹೇಳಿದರು. ಪತ್ರಿಕೆಗಳು ನಿಷ್ಪಕ್ಷಪಾತವಾಗಿ ನೈಜ ವಿಚಾರಗಳನ್ನು ಜನರ ಮುಂದಿಡಬೇಕು. ಸುಳ್ಳು ಸುದ್ದಿಗಳಿಗೆ, ಸಮಾಜವನ್ನು ಒಡೆಯುವ ವಿಚಾರಗಳಿಗೆ ಹಾಗೂ ಮೌಢ್ಯಗಳಿಗೆ ಮಾಧ್ಯಮಗಳು ಪ್ರಚಾರ ನೀಡಬಾರದು ಎಂದು ಸಲಹೆ ನೀಡಿದರು. ಖಾದ್ರಿ ಶಾಮಣ್ಣ ಅವರು 'ಕನ್ನಡಪ್ರಭ' ಪತ್ರಿಕೆಯ ಸಂಪಾದಕರಾಗಿ ಪತ್ರಿಕೋದ್ಯಮದ ಮೌಲ್ಯಗಳನ್ನು ಎತ್ತಿಹಿಡಿದಿದ್ದರು. ಗಂಭೀರ ವಿಚಾರಗಳನ್ನೂ ಸರಳ ಭಾಷೆಯಲ್ಲಿ ಜನರಿಗೆ ತಲುಪಿಸುವ ಸಾಮರ್ಥ್ಯ ಅವರಿಗಿತ್ತು. ಅವರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದು, ಸಮಾಜವಾದಿ ಚಿಂತನೆ ಹಾಗೂ ಪ್ರಜಾಪ್ರಭುತ್ವದ ಮೇಲೆ ಅಪಾರ ನಂಬಿಕೆ ಹೊಂದಿದ್ದರು ಎಂದು ಸಿದ್ದರಾಮಯ್ಯ ಸ್ಮ-ರಿಸಿದರು.ಪತ್ರಿಕಾ ಸ್ವಾತಂತ್ರ್ಯಕ್ಕೆ ತಾನು ಸದಾ ಗೌರವ ನೀಡುತ್ತಿದ್ದು, ತನ್ನ ಬಗ್ಗೆ ಅಥವಾ ತಮ್ಮ ಪಕ್ಷದ ಬಗ್ಗೆ ಟೀಕೆ ಮಾಡಿದ ಕಾರಣಕ್ಕೆ ಯಾವುದೇ ಪತ್ರಕರ್ತ-ರಿಗೆ ಅಥವಾ ಮಾಧ್ಯಮ ಸಂಸ್ಥೆಗಳಿಗೆ ಒತ್ತಡ ಹೇರುವ ಕೆಲಸ ಮಾಡಿಲ್ಲ ಮತ್ತು ಮುಂದೆಯೂ ಮಾಡುವುದಿಲ್ಲ ಎಂದು ಹೇಳಿದರು.ಜಾತಿ ವ್ಯವಸ್ಥೆ ಹಾಗೂ ಅಸಮಾನತೆಯನ್ನು ಹೋಗಲಾಡಿಸಲು ಪತ್ರಿಕೋದ್ಯಮವು ಜಾತ್ಯತೀತವಾಗಿ ಮತ್ತು ಸಾಮಾಜಿಕ ಬದ್ಧತೆಯಿಂದ ಕೆಲಸ ಮಾಡಬೇಕು. ಸಮಸಮಾಜ ನಿರ್ಮಾಣಕ್ಕೆ ಕೊಡುಗೆ ನೀಡಬೇಕು ಎಂದು ಕರೆ ನೀಡಿದರು.ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪ, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯ ಗೌರವ ' ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಜಾಲಹಳ್ಳಿ ಸಮೀಪದ ಚಿಂಚೋಡಿಯಲ್ಲಿ ಬೆಳೆ ಹಾನಿ ಪರಿಶೀಲಿಸಿದ ಸಚಿವ ಅಜಯ್ ಸಿಂಗ್

## ದೇವದುರ್ಗ ತಾಲೂಕು ಬರಪೀಡಿತ ಎಂದು ಘೋಷಿಸಿ; ಎಕರೆಗೆ ₹35 ಸಾವಿರ ಪರಿಹಾರಕ್ಕೆ ರೈತ ಸಂಘಟನೆಗಳ ಆಗ್ರಹ

❑ ನೈಜ್ಯ ದೆಸೆ ನ್ಯೂಸ್

ದೇವದುರ್ಗ, ಆ.7: ಜಿಲ್ಲೆಯ ಬರಪೀಡಿತ ಪ್ರದೇಶಗಳ ವಾಸ್ತವ ಸ್ಥಿತಿಗತಿಯನ್ನು ಅರಿಯುವ ಉದ್ದೇಶದಿಂದ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವ ಡಾ. ಅಜಯ್ ಸಿಂಗ್ ಅವರು ಶುಕ್ರವಾರ ದೇವದುರ್ಗ ತಾಲೂಕಿನ ಜಾಲಹಳ್ಳಿ ಸಮೀಪದ ಚಿಂಚೋಡಿ ಗ್ರಾಮಕ್ಕೆ ಭೇಟಿ ನೀಡಿ ರೈತರ ಜಮೀನುಗಳಲ್ಲಿ ಮಳೆ ಕೊರತೆಯಿಂದ ಹಾನಿಗೊಳಗಾದ ಬೆಳೆಗಳನ್ನು ಪರಿಶೀಲಿಸಿದರು.ರೈತರ ಜಮೀನುಗಳಿಗೆ ತೆರಳಿದ ಸಚಿವರು ಒಣಗಿರುವ ಬೆಳೆಗಳನ್ನು ವೀಕ್ಷಿಸಿ, ಅಧಿಕಾರಿಗಳೊಂದಿಗೆ ಸ್ಥಳಪರಿಶೀಲನೆ ನಡೆಸಿದರು. ಇದೇ ವೇಳೆ ರೈತರ ಸಮಸ್ಯೆಗಳನ್ನು ಆಲಿಸಿದರು.ಸಚಿವರು ಮಾತನಾಡಿ, ಬೆಳೆ ಹಾನಿ ಸಮೀಕ್ಷೆಯನ್ನು ತ್ವರಿತವಾಗಿ ಪೂರ್ಣಗೊಳಿಸಿ ವರದಿಯನ್ನು ಮುಖ್ಯಮಂತ್ರಿಗಳಿಗೆ ಸಲ್ಲಿಸಲಾಗುವುದು. ಸರ್ಕಾರ ಬರ ಪರಿಸ್ಥಿತಿಯನ್ನು ಗಂಭೀರವಾಗಿ ಪರಿಗಣಿಸಿದ್ದು, ರೈತರ ಹಿತಾಸಕ್ತಿಗೆ ಮೊದಲ ಆದ್ಯತೆ ನೀಡಲಾಗುವುದು ಎಂದು ಭರವಸೆ ನೀಡಿದರು. ದೇವದುರ್ಗ ತಾಲೂಕನ್ನು ಬರಪೀಡಿತ ತಾಲೂಕು ಎಂದು ಘೋಷಿಸುವ ಕುರಿತು ಹಾಗೂ ರೈತರಿಗೆ ಎಷ್ಟು ಪರಿಹಾರ ನೀಡಲಾಗುತ್ತದೆ ಎಂಬ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ಬರ ಘೋಷಣೆ ಮತ್ತು ಪರಿಹಾರದ ಕುರಿತು ಸರ್ಕಾರದ ಮಟ್ಟದಲ್ಲಿ ಚರ್ಚಿಸಿ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದು ತಿಳಿಸಿದರು.ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಪೂವಿತ ಎಸ್., ಶಾಸಕ ಕರೆಮ್ಮ ಜಿ. ನಾಯಕ, ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಕಾಂಗ್ರೆಸ್ ಮುಖಂಡರಾದ ರಾಜಶೇಖರ್ ನಾಯಕ, ರಾಮಣ್ಣ ಇರಬಗೇರ, ಬಸವರಾಜ ಪಂಪಾಪತಿ, ಭೀಮಣ್ಣ ವಿರಾಗೋಟ್ ಸೇರಿದಂತೆ ಜನಪ್ರತಿನಿಧಿಗಳು ಉಪಸ್ಥಿತರಿದ್ದರು.



❑

ಬರ ಘೋಷಣೆ; ಎಕರೆಗೆ □35 ಸಾವಿರ ಪರಿಹಾರಕ್ಕೆ ಆಗ್ರಹ ಸಚಿವರ ಭೇಟಿ ವೇಳೆ ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ರಕ್ಷಣಾ ವೇದಿಕೆ, ವಿದ್ಯಾರ್ಥಿ ಹಾಗೂ ಯುವಜನ ಸಂಘಟನೆಗಳ ಮುಖಂಡರು ಮನವಿ ಸಲ್ಲಿಸಿ, ದೇವದುರ್ಗ ತಾಲೂಕನ್ನು ತಕ್ಷಣ ಬರಪೀಡಿತ ತಾಲೂಕು ಎಂದು ಘೋಷಿಸಿ, ಪ್ರತಿ ಎಕರೆಗೆ □35 ಸಾವಿರ ಬೆಳೆ ಪರಿಹಾರ ನೀಡಬೇಕು ಎಂದು ಒತ್ತಾಯಿಸಿದರು.ಜಾಲಹಳ್ಳಿಯಲ್ಲಿ ಮಹಿಳಾ ವಿದ್ಯಾರ್ಥಿನಿಯರಿಗಾಗಿ ಸರ್ಕಾರಿ ವಸತಿ ನಿಲಯ ಮಂಜೂರು ಮಾಡಬೇಕು. ಜಾಲಹಳ್ಳಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಅಗತ್ಯ ವೈದ್ಯರು ಹಾಗೂ ಸಿಬ್ಬಂದಿಯನ್ನು ನೇಮಿಸಬೇಕು. ಎರವಲು ಸೇವೆಗೆ ತೆರಳಿರುವ ನರ್ಸ್‌ಗಳನ್ನು ವಾಪಸ್ ಕರೆಸಿ ಸಮರ್ಪಕ ಆರೋಗ್ಯ ಸೇವೆ ಒದಗಿಸಬೇಕು ಎಂದು ಆಗ್ರಹಿಸಿದರು.ಮನವಿ ಸಲ್ಲಿಸುವ ಸಂದರ್ಭದಲ್ಲಿ ಹನುಮಂತ ಮಡಿವಾಳ, ರಂಗನಾಥ ಬುಂಕಲದೊಡ್ಡಿ, ನಂದಪ್ಪ ಲಿಂಗದಹಳ್ಳಿ, ತಮ್ಮಣ್ಣ ಹೇರುಂಡಿ, ಮಹಾಲಿಂಗ ದೊಡ್ಡಮನಿ, ಸಂತೋಷ ತ್ಯಾಪ್ಲಿ, ಶಿವರಾಜ ನಾಯಕ, ರಿಯಾಜ್ ಆರ್ಶಿ, ರಾಜು ನಾಯಕ, ಮಕ್ತುಮ್ ಭಾಷಾ ಹಾಗೂ ದುರುಗಪ್ಪ ಹೊರಟ್ಟಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

❑

20 ವರ್ಷಗಳಿಂದ ಒಂದೇ ಸ್ಥಳದಲ್ಲಿರುವ ಕಂದಾಯ ನಿರೀಕ್ಷಕರ ವರ್ಗಾವಣೆಗೆ ಮನವಿಖುರ್ಷಿದ್ ಪಟೇಲ್ ನೇತೃತ್ವದಲ್ಲಿ ಜಾಲಹಳ್ಳಿ ಗ್ರಾಮದಲ್ಲಿ 20 ವರ್ಷಕ್ಕೂ ಹೆಚ್ಚು ಕಾಲ ಒಂದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಂದಾಯ ನಿರೀಕ್ಷಕ ದೇವರೆಡ್ಡಿ ಅವರನ್ನು ಬೇರೆಡೆಗೆ ವರ್ಗಾವಣೆ ಮಾಡಿ, ಅವರ ಕಾರ್ಯವೈಖರಿ ಕುರಿತು ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವರಿಗೆ ಪ್ರತ್ಯೇಕ ಮನವಿ ಸಲ್ಲಿಸಲಾಯಿತು.ಕಂದಾಯ ಇಲಾಖೆಯ ಕೆಲಸಗಳಲ್ಲಿ ಅನಗತ್ಯ ವಿಳಂಬ, ರೈತರು ಹಾಗೂ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆ, ಆಡಳಿತಾತ್ಮಕ ನಿರ್ಲಕ್ಷ್ಯ ಹಾಗೂ ಕೆಲವರಿಗೆ ಮಾತ್ರ ವಿಶೇಷ ಆದ್ಯತೆ ನೀಡಲಾಗುತ್ತಿದೆ ಎಂಬ ಆರೋಪಗಳನ್ನು ಮನವಿಯಲ್ಲಿ ಉಲ್ಲೇಖಿಸಲಾಗಿದೆ.ಮನವಿಗೆ ಸ್ಪಂದಿಸಿದ ಜಿಲ್ಲಾಧಿಕಾರಿ ಪೂವಿತ ಎಸ್. ಅವರು ಕಂದಾಯ ನಿರೀಕ್ಷಕ ದೇವರೆಡ್ಡಿ ಅವರನ್ನು ಶೀಘ್ರದಲ್ಲೇ ಬೇರೆಡೆಗೆ ವರ್ಗಾವಣೆ ಮಾಡುವುದಾಗಿ ಭರವಸೆ ನೀಡಿದರು.

❑

ರೈತರ ಬೆಳೆ ಉಳಿಸಲು ತಕ್ಷಣ ಕ್ರಮಕ್ಕೆ ಒತ್ತಾಯ ಮಳೆ ಕೊರತೆಯಿಂದ ದೇವದುರ್ಗ ತಾಲೂಕಿನ ಹಲವು ಭಾಗಗಳಲ್ಲಿ ಮುಂಗಾರು ಬೆಳೆಗಳು ಒಣಗುತ್ತಿರುವ ಹಿನ್ನೆಲೆಯಲ್ಲಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಬೆಳೆ ಹಾನಿ ಸಮೀಕ್ಷೆಯನ್ನು ಶೀಘ್ರ ಪೂರ್ಣಗೊಳಿಸಿ, ತಾಲೂಕನ್ನು ಬರಪೀಡಿತ ಎಂದು ಘೋಷಿಸುವ ಜೊತೆಗೆ ರೈತರಿಗೆ ಸೂಕ್ತ ಪರಿಹಾರ ಕಲ್ಪಿಸಬೇಕು ಎಂಬುದು ರೈತ ಸಂಘಟನೆಗಳ ಪ್ರಮುಖ ಬೇಡಿಕೆಯಾಗಿದೆ.ಅದೇ ರೀತಿ ನಾರಾಯಣಪುರ ಬಲದಂಡೆ ಕಾಲುವೆಗೆ ನಿರಂತರ ನೀರು ಹರಿಸುವ ಮೂಲಕ ಬೆಳೆಗಳನ್ನು ಉಳಿಸಲು ಸರ್ಕಾರ ತುರ್ತು ಕ್ರಮ ಕೈಗೊಳ್ಳಬೇಕು ಎಂದು ಸಂಘಟನೆಗಳು ಒತ್ತಾಯಿಸಿವೆ.

ವರದಿ: ಖಾಜಾ ಹುಸೇನ್ ಬಾಬಾ ಜಾಲಹಳ್ಳಿ

❑

ಬಲದಂಡೆ ಕಾಲುವೆಗೆ ನಿರಂತರ ನೀರು ಹರಿಸಲು ಆಗ್ರಹ ದೇವದುರ್ಗ ತಾಲೂಕನ್ನು ಬರಪೀಡಿತ ತಾಲೂಕು ಎಂದು ಘೋಷಿಸಿ ರೈತರಿಗೆ ಸೂಕ್ತ ಬರ ಪರಿಹಾರ ನೀಡಬೇಕು ಹಾಗೂ ನಾರಾಯಣಪುರ ಬಲದಂಡೆ ಕಾಲುವೆಯಲ್ಲಿ ಜಾ-ರಿಯಲ್ಲಿರುವ ವಾರಬಂಧಿ ಪದ್ಧತಿಯನ್ನು ರದ್ದುಪಡಿಸಿ ನಿರಂತರವಾಗಿ ನೀರು ಹರಿಸಬೇಕು ಎಂದು ಕರ್ನಾಟಕ ರಕ್ಷಣಾ ವೇದಿಕೆ ದೇವದುರ್ಗ ತಾಲೂಕು ಘಟಕದ ವತಿಯಿಂದ ಸಚಿವ ಡಾ. ಅಜಯ್ ಸಿಂಗ್ ಅವರಿಗೆ ಮನವಿ ಸಲ್ಲಿಸಲಾಯಿತು. ದೇವದುರ್ಗ ತಾಲೂಕಿನ ರೈತರು ಎಕರೆಗೆ ಸುಮಾರು □25 ಸಾವಿರ ಖರ್ಚು ಮಾಡಿ ಮುಂಗಾರು ಬಿತ್ತನೆ ಮಾಡಿದ್ದು, ಎರಡು ತಿಂಗಳು ಕಳೆದರೂ ಸಮರ್ಪಕ ಮಳೆಯಾಗದ ಹಿನ್ನೆಲೆಯಲ್ಲಿ ಬೆಳೆಗಳು ಒಣಗಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹೀಗಾಗಿ ಸರ್ಕಾರ ತಕ್ಷಣ ಸೂಕ್ತ ಬೆಳೆ ಪರಿಹಾರ ನೀಡಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.ವಾರಬಂಧಿ ಪದ್ಧತಿಯಿಂದ ಕಾಲುವೆಯ ಕೊನೆಯ ಭಾಗದ ರೈತರಿಗೆ ಸಮರ್ಪಕವಾಗಿ ನೀರು ತಲುಪುತ್ತಿಲ್ಲ. ಆದ್ದ-ರಿಂದ ವಾರಬಂಧಿ ಪದ್ಧತಿಯನ್ನು ಸ್ಥಗಿತಗೊಳಿಸಿ ಕಾಲುವೆಗೆ ನಿರಂತರವಾಗಿ ನೀರು ಹರಿಸಬೇಕು ಎಂದು ಆಗ್ರಹಿಸಲಾಯಿತು.ಈ ಸಂದರ್ಭದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ದೇವದುರ್ಗ ತಾಲೂಕು ಅಧ್ಯಕ್ಷ ನಂದಪ್ಪ ಪಿ. ಮಡ್ಡಿ, ತಾಲೂಕು ಸಂಚಾಲಕ ಭೀಮಣ್ಣ ನಾಯಕ, ಪ್ರಧಾನ ಕಾರ್ಯದರ್ಶಿ ಗುರುನಾಥ್ ರೆಡ್ಡಿ, ಜಾಲಹಳ್ಳಿ ಹೋಬಳಿ ಅಧ್ಯಕ್ಷ ತಮ್ಮಣ್ಣ ಹೇರುಂಡಿ, ವಿಕಲಚೇತನ ಜಾಲಹಳ್ಳಿ ಹೋಬಳಿ ಅಧ್ಯಕ್ಷ ಭೀಮರಾಯ ಮಕಾಶಿ, ರಂಗಪ್ಪ ಬಂಡಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಸಹಕಾರಿಗಳ ಜ್ಞಾನೋತ್ಸವದಲ್ಲಿ ಕುಷ್ಟಗಿಗೆ ಕೀರ್ತಿ

## ತೃತೀಯ ಸ್ಥಾನ ಪಡೆದ ಶಿವಶರಣ ನಾಲತ್ವಾಡರಿಗೆ ಸನ್ಮಾನ

❑ ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ, ಬೆಂಗಳೂರು ವತಿಯಿಂದ ಕೊಪ್ಪಳದಲ್ಲಿ ಆಯೋಜಿಸಿದ್ದ 'ಸಹಕಾರಿಗಳ ಜ್ಞಾನೋತ್ಸವ□2026' ರಸಪ್ರಶ್ನೆ (ಕ್ವಿಜ್) ಸ್ಪರ್ಧೆಯಲ್ಲಿ ಕೊಪ್ಪಳ ಜಿಲ್ಲೆಯ ಸೌಹಾರ್ದ ಸಹಕಾ-ರಿಗಳ ಪೈಕಿ ಕುಷ್ಟಗಿ ತಾಲೂಕಿನ ಸಹಕಾರಿ ಸಂಘಗಳ ವಿಭಾಗದಲ್ಲಿ ತೃತೀಯ ಸ್ಥಾನ ಪಡೆದು



ಪ್ರಶಸ್ತಿ ಹಾಗೂ ಪ್ರಮಾಣಪತ್ರ ಗಳಿಸಿದ ಶಿವಶರಣ ಬಿ. ನಾಲತ್ವಾಡ ಅವರನ್ನು ಶ್ರೀ ಸಪ್ತಗಿರಿ ಸೌಹಾರ್ದ ಸಹಕಾರಿ ಸಂಘದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.ಶ್ರೀ ಸಪ್ತಗಿರಿ ಸೌಹಾರ್ದ ಸಹಕಾರಿ ಸಂಘದ ಕುಷ್ಟಗಿ, ಹನಮನಾಳ, ಯಲಬುರ್ಗಾ ಹಾಗೂ ಕಾರಟಗಿ ಶಾಖೆಗಳ ಸಿಬ್ಬಂದಿ ವರ್ಗದವರು ಒಗ್ಗೂಡಿ ಸಾಧಕ ಶಿವಶರಣ ನಾಲತ್ವಾಡ ಅವರನ್ನು ಅಭಿನಂದಿಸಿ ಸನ್ಮಾನಿಸಿದರು.ಈ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷ ನಾಗರಾಜ ಕಂದಗಲ್, ಮುಖ್ಯ ಕಾರ್ಯನಿರ್ವಾಹಕರಾದ ಶೋಭಾ ಟಿ. ಬಳೂಟಗಿ, ಆಡಳಿತ ಮಂಡಳಿ ಸದಸ್ಯರು, ಹನಮನಾಳ ಶಾಖೆಯ ವ್ಯವಸ್ಥಾಪಕ ಮುತ್ತಣ್ಣ ಭಂಡಾರಿ, ಕಾರಟಗಿ ಶಾಖೆಯ ವ್ಯವಸ್ಥಾಪಕಿ ರಂಜಿತಾ ಸೇ-ರಿದಂತೆ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.ಸಹಕಾರ ಕ್ಷೇತ್ರದಲ್ಲಿ ಜ್ಞಾನ ಮತ್ತು ಕೌಶಲ್ಯ ಬೆಳೆಸಿಕೊಳ್ಳುವ ನಿಟ್ಟಿನಲ್ಲಿ ಇಂತಹ ಸ್ಪರ್ಧೆಗಳು ಸಹಕಾ-ರಿಗಳಿಗೆ ಪ್ರೇರಣೆಯಾಗಲಿದ್ದು, ಶಿವಶರಣ ನಾಲತ್ವಾಡ ಅವರ ಸಾಧನೆ ಸಂಘದ ಸಿಬ್ಬಂದಿ ಹಾಗೂ ಸಹಕಾರಿಗಳಿಗೆ ಹೆಮ್ಮೆಯ ಸಂಗತಿಯಾಗಿದೆ ಎಂದು ಈ ಸಂದರ್ಭದಲ್ಲಿ ಅಭಿನಂದನೆ ಸಲ್ಲಿಸಲಾಯಿತು.

# ಹಾಲಾಪೂರ:ಜನನಿ ಕಾಲೇಜ್ ನಲ್ಲಿ ಸ್ವಾಗತ ಸಮಾರಂಭ

❑ ನೈಜ್ಯ ದೆಸೆ ನ್ಯೂಸ್

ಹಾಲಾಪೂರ*: ಗ್ರಾಮಲ್ಲಿರುವ ಜನನಿ ಪದವಿ ಪೂರ್ವ ಕಾಲೇಜ್ ನಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭ ನಡೆಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ದಂಡಗುಂಡಪ್ಪತಾತ ಜಂಗಮರಹಳ್ಳಿ ನೇರವೆ-ರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯ ನಾಗೇಶ ಜಂಗಮರಹಳ್ಳಿ



ಅಲಂಕರಿಸಿದ್ದರು. ಮುಖ್ಯ ಅತಿಥಿಯಾಗಿ ಸುಭಾಷ್ ಸಿಂಗ್ ಮುಖ್ಯಗುರು ಮಾತನಾಡಿ ವಿದ್ಯಾರ್ಥಿಗಳು ಅಕ್ಷರ ಜೊತೆಗೆ ಸಂಸ್ಕಾರ ಕಲಿಯಬೇಕು,ಅಕ್ಷರ ಜ್ಞಾನ ಕೊಡುತ್ತದೆ, ಸಂಸ್ಕಾರ ಬದುಕನ್ನು ರೂಪಿಸುತ್ತದೆ ಅದಕ್ಕೆ ಎರಡು ಅಂಶಗಳು ವಿದ್ಯಾರ್ಥಿಗಳ ಜೀವನಕ್ಕೆ ಬಹುಮುಖ್ಯ,ಹಾಗೆ ನಿರಂತರ ಓದು ಸತತ ಪ್ರಯತ್ನ ಜೀವನದಲ್ಲಿ ಯಶಸ್ಸುಗಳಿಸಲು ಸಾದ್ಯ ಎಂದು ಹೇಳಿದರು. ಈ ಸಂದರ್ಭದಲ್ಲಿ ಉಪನ್ಯಾಸಕರಾದ ಮ-ರಿಸ್ವಾಮಿ ಹಾಲಾಪೂರ, ರಾಮಣ್ಣ ಪೊತ್ನಾಳ, ವಿರೇಶ ಜಂಗಮರಹಳ್ಳಿ, ಸಿದ್ದಪ್ಪ ಉದ್ಬಳ,ದುರಗೇಶ ಬಳಗನೂರು ಇನ್ನಿತರರು ಇದ್ದರು.

## ಸಾಹಿತ್ಯ ಸಿಂಚನ

### ಮಣ್ಣಾಗದ ಕನಸು... (ಹೆಣ್ಣು ಭ್ರೂಣ ಹತ್ಯೆ)

ಗರ್ಭದ ಗವಿಯಲ್ಲಿ ಹನಿ ಹನಿ ಬೆಳೀತಿದ್ದೆ
ನಾಮವಿಲ್ಲದ ನಕ್ಷತ್ರದಂತೆ ಕಾದಿದ್ದೆ
ತಾಯಿಯ ಉಸಿರಿನಲ್ಲಿ ಲಾಲಿಯ ಕೇಳಿದ್ದೆ
ತಂದೆಯ ಕನಸಿನಲ್ಲಿ ದೀಪವಾಗಿದ್ದೆ

ಬಿಳಿ ಬೆಳಕಿನ ಕೋಣೆಯಲ್ಲಿ ಪ್ರಶ್ನೆಯಾಯಿತು
ಅಕ್ಷರವಿಲ್ಲದ ನನ್ನ ಹೆಸರು ಅಳಿಯಿತು
ಜೋಳ ಬೆಳೆಯಬೇಕಿದ್ದ ಅಂಗೈಗಳು
ಪುಸ್ತಕ ಹಿಡಿಯಬೇಕಿದ್ದ ಬೆರಳುಗಳು
ಯಾವ ಲೆಕ್ಕಕ್ಕೆ ಸೊನ್ನೆಯಾದವು?

ಸಾಲದ ಕಾಗದಕ್ಕಿಂತ ನಾನು ಭಾರವಾದೆನಾ?
ಬೆಳ್ಳಿಯ ಕಾಲ್ಗೊಲುಗಿಂತ ನನ್ನ ನಗು
ಅಗ್ಗವಾಯಿತಾ?
ಸೂರ್ಯನ ಎದುರು ನಿಲ್ಲಬೇಕಿದ್ದ ಮುಖಕ್ಕೆ
ಕತ್ತಲೆಯ ಮುಸುಕು ಯಾಕೆ ಹಾಕಿದಿರಿ?

ಊರಿನ ಬಾವಿ ಬತ್ತಿದರೆ ಮಳೆ ಬರುತ್ತದೆ
ಆದರೆ ಹೆಣ್ಣಿನ ಕನಸು ಬತ್ತಿದರೆ
ನಾಳೆಯೇ ಬತ್ತಿ ಹೋಗುವುದಿಲ್ಲವೇ?

ಮಡಿಲು ಮಣ್ಣಾಗುವ ಮುನ್ನ ಯೋಚಿಸಿ
ಗರ್ಭವು ದೇವಸ್ಥಾನ, ಗೋರಿಯಲ್ಲ
ಹೆಣ್ಣು ಬದುಕಿದರೆ ಕುಲ ಬೆಳೆಯುವುದು
ಹೆಣ್ಣು ಅಳಿದರೆ ಕಥೆಯೇ ಮುಗಿಯುವುದು

ಬಿಡಿ ನನ್ನ ಬೆಳೆಯಲು
ಬಿಡಿ ನನ್ನ ಬದುಕಲು
ನಾನು ಯಾರದ್ದೋ ಮಗಳಾಗುವ ಮೊದಲು
ನಾನು ನಾನಾಗಿರಲು ಬಿಡಿ

–ಎಸ್.ದುರಗಪ್ಪ. ಕುಷ್ಟಗಿ.

## ಪ್ರಾಥಮಿಕ ಆರೋಗ್ಯ ಕೇಂದ್ರ ಮಟಮಾರಿ ವತಿಯಿಂದ ವಿಶ್ವ ಸ್ತನ್ಯಪಾನ ಸಪ್ತಾಹ ಆಚರಣೆ

# ಎದೆ ಹಾಲೇ ಮಗುವಿನ ಮೊದಲ ರೋಗನಿರೋಧಕ ಲಸಿಕೆ

❑ ನೈಜ್ಯ ದೆಸೆ ನ್ಯೂಸ್

ಮಟಮಾರಿ, ಆ.6: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರ ಮಟಮಾರಿ ವತಿಯಿಂದ ವಿಶ್ವ ಸ್ತನ್ಯಪಾನ ಸಪ್ತಾಹವನ್ನು ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಅರವಿಂದ್ ಕುಮಾರ್ ಮಾತನಾಡಿ, ಮಗು ಹುಟ್ಟಿದ ಅರ್ಧ ಗಂಟೆಯೊಳಗೆ ತಾಯಿ ನೀಡುವ ಎದೆ ಹಾಲು ಅಮೃತಕ್ಕೆ ಸಮಾನವಾಗಿದೆ. ತಾಯಂದಿರು ಮಗುವಿಗೆ ಎದೆ ಹಾಲು ನೀಡುವುದರಿಂದ ಮಗುವಿನ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೆ ಸಹಕಾರಿಯಾಗುವುದರ ಜೊತೆಗೆ ಆರೋಗ್ಯವಂತ ಸಮಾಜ ನಿರ್ಮಾಣಕ್ಕೂ ಸಹಕಾರಿಯಾಗುತ್ತದೆ ಎಂದು ಹೇಳಿದರು. ಮಗು ಹುಟ್ಟಿದ ದಿನದಿಂದ ಆರು ತಿಂಗಳವರೆಗೆ



ಕೇವಲ ತಾಯಿ ಎದೆ ಹಾಲನ್ನೇ ನೀಡಬೇಕು. ಆರು ತಿಂಗಳ ನಂತರ ಪೂರಕ ಪೌಷ್ಟಿಕ ಆಹಾರದೊಂದಿಗೆ ಎರಡು ವರ್ಷದವರೆಗೆ ಎದೆ ಹಾಲು ನೀಡುವುದನ್ನು ಮುಂದುವರಿಸಬೇಕು. ಇದರಿಂದ ಮಕ್ಕಳನ್ನು ಶ್ವಾಸಕೋಶದ ಸೋಂಕು, ಜೀರ್ಣಾಂಗದ ಸೋಂಕು ಹಾಗೂ ಚರ್ಮದ ಸೋಂಕುಗಳಿಂದ ರಕ್ಷಿಸಲು ಸಹಾಯವಾಗುತ್ತದೆ. ತಾಯಂದಿರಲ್ಲಿ ಸ್ತನ ಕ್ಯಾನ್ಸರ್ ಅಪಾಯವನ್ನು ಕಡಿಮೆ ಮಾಡುವಲ್ಲಿಯೂ ಸ್ತನ್ಯಪಾನ ಸಹಕಾರಿಯಾಗಿದೆ ಎಂದು ತಿಳಿಸಿದರು.ಹಿರಿಯ ಆರೋಗ್ಯ ನಿರೀಕ್ಷಕ ವಸಂತ ಮಾತನಾಡಿ, ಬಾಣಂತಿಯರು ಸಮತೋಲನ ಆಹಾರ ಸೇವಿಸುವುದು ಅತ್ಯಂತ ಅಗತ್ಯ. ಆರೋಗ್ಯ ಇಲಾಖೆ ನೀಡುವ ಕ್ಯಾಲ್ಸಿಯಂ ಮತ್ತು ಕಬ್ಬಿಣಾಂಶದ ಮಾತ್ರೆಗಳನ್ನು ನಿಯಮಿತವಾಗಿ ಸೇವಿಸಬೇಕು ಎಂದು ಸಲಹೆ ನೀಡಿದರು.PHCO ವಿಜಯಲಕ್ಷ್ಮಿ ಮಾತನಾಡಿ, 1992ರಿಂದ ವಿಶ್ವದಾದ್ಯಂತ ಆಗಸ್ಟ್ ಮೊದಲ ವಾರವನ್ನು ವಿಶ್ವ ಸ್ತನ್ಯಪಾನ ಸಪ್ತಾಹವಾಗಿ ಆಚರಿಸಲಾಗುತ್ತಿದ್ದು, ಎದೆ ಹಾಲಿನ ಮಹತ್ವದ ಕುರಿತು ತಾಯಂದಿರಲ್ಲಿ ಜಾಗೃತಿ ಮೂಡಿಸುವುದು ಕಾರ್ಯಕ್ರಮದ ಉದ್ದೇಶವಾಗಿದೆ ಎಂದರು. ತಾಯಿ ಎದೆ ಹಾಲೇ ಮಗುವಿಗೆ ಮೊದಲ ರೋಗನಿರೋಧಕ ಲಸಿಕೆಯಾಗಿದೆ. ಮಗುವಿಗೆ ನಿಗದಿತ ವೇಳಾಪಟ್ಟಿಯಂತೆ ಲಸಿಕೆಗಳನ್ನು ತಪ್ಪದೆ ಹಾಕಿಸಬೇಕು. ನವಜಾತ ಶಿಶುವಿಗೆ ದಿನಕ್ಕೆ ಸುಮಾರು 8ರಿಂದ 10 ಬಾರಿ ಎದೆ ಹಾಲು ನೀಡುವ ವಿಧಾನ ಹಾಗೂ ಕುಟುಂಬ ಕಲ್ಯಾಣ ಕ್ರಮಗಳ ಕುರಿತು ಅವರು ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಆಶಾ ಕಾರ್ಯಕರ್ತೆಯರಾದ ಸುಭದ್ರಾ, ವಿದ್ಯಾರಾಣಿ, ಉಮಾ, ಬಿ. ಲಕ್ಷ್ಮಿ ಹಾಗೂ ಎನ್. ಲಕ್ಷ್ಮಿ ಉಪಸ್ಥಿತರಿದ್ದರು. ಆಶಾ ಕಾರ್ಯಕರ್ತೆ ಚಂದ್ರಿಕಾ ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

# ಭರದಿಂದ ಸಾಗಿದ ‘ಪಂಚಾಯಿತಿ’ ಚಿತ್ರೀಕರಣ

❑ ನೈಜ್ಯ ದೆಸೆ ನ್ಯೂಸ್

ಶಿವಳ್ಳಿ : ನೇಟಿವ್ ಕ್ರಿಯೆಶನ್ಸ್ ಅಡಿಯಲ್ಲಿ ದೊಡ್ಡ ನಾಗಯ್ಯ ನಿರ್ಮಿಸುತ್ತಿರುವ ಹಿರಿಯ ನಿರ್ದೇಶಕ ಪಿ.ಶೇಷಾದ್ರಿ ನಿರ್ದೇಶನದಲ್ಲಿ “ಪಂಚಾಯಿತಿ” ಕನ್ನಡ ಚಲನಚಿತ್ರದ ಚಿತ್ರೀಕರಣ ಧಾರವಾಡ ಸಮೀಪದ ಶಿವಳ್ಳಿಯಲ್ಲಿ ಭರದಿಂದ ಸಾಗಿದೆ., ಶಿವಳ್ಳಿ, ಹೆಬಸೂರ ಗ್ರಾಮಗಳಲ್ಲಿ ಮತ್ತು ಸುತ್ತಮುತ್ತ ಕಳೆದೊಂದು ವಾರದಿಂದ ಚಿತ್ರೀಕರಣ ಭರದಿಂದ ಸಾಗಿದೆ. ಪಿ.ಶೇಷಾದ್ರಿ ಚಿತ್ರವೆಂದರೆ ತುಂಬಾ ಅಚ್ಚುಕಟ್ಟು ಎಂಬುದರಲ್ಲಿ ಎರಡು ಮಾತಿಲ್ಲ. ರಾಷ್ಟ್ರ, ರಾಜ್ಯಗಳ ಒಟ್ಟು 13 ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿರುವ ಪಿ.ಶೇಷಾದ್ರಿ ಚಿತ್ರರಂಗ ಕಂಡ ಒಬ್ಬ ಅತ್ಯುತ್ತಮ ಹಿರಿಯ ನಿರ್ದೇಶಕ. ಕಥೆಯ ಆಯ್ಕೆಯಿಂದ ಪಾತ್ರಗಳವರೆಗೆ, ಪ್ರಾದೇಶಿಕತೆಯ ವೇಷಭೂಷಣ, ಸಂಭಾಷಣೆ, ಸಂಕಲನವರೆಗೂ ಅತಿ ಸೂಕ್ಷ್ಮವಾಗಿ ಗಮನಿಸುತ್ತಾರೆ. ಅವರ ಚಿತ್ರಗಳಲ್ಲಿ ಸಮಾಜಕ್ಕೊಂದು ಗಟ್ಟಿಯಾದ ಸಂದೇಶ ಖಂಡಿತ ಇರುತ್ತದೆ. ಈ ಚಿತ್ರದಲ್ಲಿ ಹಾಲಳ್ಳಿ ಉತ್ತರ ಕರ್ನಾಟಕದ ಒಂದು ಹಳ್ಳಿ. ಅಲ್ಲಿಯ ಗ್ರಾಮ



ಪಂಚಾಯಿತಿ ಚುನಾವಣೆಯಲ್ಲಿ ನಡೆಯುವ ರಾಜಕೀಯವೇ ಈ ಚಲನಚಿತ್ರದ ಕಥಾವಸ್ತು. ಮುಖ್ಯಪಾತ್ರಧಾರಿ ಪಾಟೀಲ ಇಲ್ಲಿ ಒಬ್ಬ ವ್ಯಕ್ತಿ ಮಾತ್ರವಲ್ಲ ಇಂದಿನ ರಾಜಕೀಯ ವ್ಯವಸ್ಥೆಯ ಪ್ರತಿನಿಧಿ. ಪಂಚಾಯಿತಿಯ ಅಧ್ಯಕ್ಷನ ಹಠಾತ್ ನಿಧನದಿಂದ ಆರಂಭವಾಗುವ ಸಂಘರ್ಷ ಕ್ರಮೇಣ ಇಡೀ ಊರಿನ ರಾಜಕೀಯ ಸ್ವರೂಪವನ್ನೇ ಬದಲಿಸುತ್ತದೆ. ಇಲ್ಲಿ ಸದ್ಧಾಂತಕ್ಕಿಂತ ಅವಕಾಶ ಮುಖ್ಯವಾಗುತ್ತದೆ. ಚುನಾವಣಾ ಕಣಕ್ಕೆ ಸ್ಥಳೀಯ ಶಾಸಕರ ಪ್ರವೇಶ, ಹಣ, ಜಾತಿ–ಸಾಮಾಜಿಕ ಸಮೀಕರಣ ಮತ್ತು ಸ್ಥಳೀಯ ಅಸಮಾಧಾನಗಳು ಒಂದೊಂದಾಗಿ ಸೇರುತ್ತವೆ. ಇಲ್ಲಿ ಅಂತಿಮವಾಗಿ ಎಲ್ಲರೂ ಗೆಲ್ಲಲು ಪ್ರಯತ್ನಿಸುತ್ತಾರೆ. ಆದರೆ ಎಲ್ಲರೂ ಸೋಲುತ್ತಾರೆ. “ಪಂಚಾಯಿತಿ”ಯ ಅಂತ್ಯದಲ್ಲಿ ಉಳಿಯುವ ಪ್ರಶ್ನೆ □ ಯಾರು ಗೆದ್ದರು? □ ಎನ್ನುವುದಲ್ಲ. “ಈ ಆಟದಲ್ಲಿ ಉಳಿದದ್ದು ಏನು?” ಎಂಬುದು. ಚಿತ್ರವನ್ನು ರಾಷ್ಟ್ರಪ್ರಶಸ್ತಿ ವಿಜೇತ ಹಿರಿಯ ನಿರ್ದೇಶಕ ಪಿ.ಶೇಷಾದ್ರಿ ಚಿತ್ರಕತೆ ಬರೆದು ನಿರ್ದೇಶಿಸುತ್ತಿದ್ದಾರೆ. ಕಥೆ ಅರವಿಂದ ಮಿತ್ರ, ಛಾಯಾಗ್ರಹಣ ಗುರುಪ್ರಸಾದ್ ಕಾಶಿ. ಸಂಕಲನ ಕೆಂಪರಾಜ್. ಪಿ ಆರ್ ಓ ಆಗಿ ಡಾ. ಪ್ರಭು ಗಂಜಿಹಾಳ, ಡಾ. ವೀರೇಶ್ ಹಂಡಿಗಿ, ಸಹ ನಿರ್ದೇಶಕರಾಗಿ ಟಿ.ಆರ್. ಪ್ರಭು, ವಿದ್ಯಾಶ್ರೀ , ಪ್ರಕಾಶ್‌ರಾಜಕುಮಾರ್ ಕಾರ್ಯನಿರ್ವಹಿಸಿದ್ದಾರೆ. ದೊಡ್ಡ ನಾಗಯ್ಯ ಬಂಡವಾಳ ಹೂಡಿದ್ದಾರೆ. ವಿಶೇಷವೆಂದರೆ ಚಿತ್ರದಲ್ಲಿ ಸಂಪೂರ್ಣ ಉತ್ತರ ಕರ್ನಾಟಕದ ಸ್ಥಳೀಯ ಕಲಾವಿದರನ್ನು ಒಳಗೊಂಡಿದ್ದು ಮುಖ್ಯಭೂಮಿಕೆಯಲ್ಲಿ ಗೋಕುಲ್ ರಾಜ್, ಬಿಂದು, ಜಗದೀಶ್ ಮೂಕಿ, ಶ್ರುತಿ ಬಿಸರಹಳ್ಳಿ, ಬಸವರಾಜ್ ತಿರ್ಲಾಪುರ ಮುಂತಾದವರು ಇದ್ದಾರೆ.ಡಾ.ಪ್ರಭು ಗಂಜಿಹಾಳ

# "ಪರೋಪಕಾರದ ಮೂಲಕ ಮಗಳ ಹುಟ್ಟುಹಬ್ಬ ಆಚರಿಸಿದ ಹಳೆ ವಿದ್ಯಾರ್ಥಿ"

❑ ನೈಜ್ಯ ದೆಸೆ ನ್ಯೂಸ್

ಬಳಗಾನೂರು –: ಪಟ್ಟಣ ಸಮೀಪದ ಬೆಳ್ಳಿಗನೂರು ಗ್ರಾಮದ ಜೇಸ್ಕಾಂ ನೌಕರ ಅಂಜಪ್ಪ ನಾಯಕ ಇವರು ತಮ್ಮ ಮಗಳಾದ ತನುಷ್ಕಾ ನಾಯಕ ಇವರ 7ನೇ ವರ್ಷದ ಹುಟ್ಟುಹಬ್ಬ ಸರಳವಾಗಿ ಆಚರಿಸಿ ಅದರ ಸವಿನೆನಪಿಗಾಗಿ ತಾವು ಹುಟ್ಟಿ ಬೆಳೆದು ವಿದ್ಯೆ ಕಲಿತ ತಮ್ಮ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಎಲ್ಲಾ 80 ಮಕ್ಕಳಿಗೆ ನೋಟ್ ಬುಕ್ ಪೆನ್ ಹಾಗೂ ಸಿಹಿ ಹಂಚುವ ಮೂಲಕ ದುಂದು ವೆಚ್ಚಕ್ಕೆ ಕಡಿವಾಣ ಹಾಕಿ ಸರ್ಕಾರಿ ಶಾಲಾ ಮಕ್ಕಳಿಗೆ ಅಳಿಲು ಸೇವೆಯ ಮೂಲಕ ಇತರರಿಗೆ ಮಾದರಿಯಾಗಿದ್ದಾರೆ.ಸ್ವಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಣ, ಉಟಕನೂರಲ್ಲಿ ಹೈಸ್ಕೂಲ್ ಶಿಕ್ಷಣ, ರಾಯಚೂರಲ್ಲಿ ಸರ್ಕಾರಿ ಐಟಿಐ ಕಾಲೇಜಲ್ಲಿ ಎಲೆಕ್ಟ್ರಿಕಲ್ ಶಿಕ್ಷಣ ಪಡೆದು ಪ್ರಸ್ತುತ ರಾಯಚೂರು ಜೇಸ್ಕಾಂ ಇಲಾಖೆಯಲ್ಲಿ



ನೌಕರರಾಗಿ ಕೆಲಸ ಮಾಡುತ್ತಿರುವ ಅವರು ಕಳೆದ ಬಾರಿ ಹುಟ್ಟುಹಬ್ಬದಕ್ಕೆ ಶಾಲಾ ಸಮವಸ್ತ್ರಕ್ಕೆ ತಕ್ಕ ಬೆಲ್ಟ್ ಹಾಗೂ ಟಾಯ್ ವಿತರಣೆ ಮಾಡಿದ್ದರು. ಈ ವರ್ಷ ರಜೆ ಇಲ್ಲದೆ ಅವರ ಅನುಪಸ್ಥಿತಿಯಲ್ಲಿ ತಮ್ಮ ತಾಯಿಯ ಮೂಲಕ ಈ ಬಾರಿ ಕಲಿಕಾ ಸಾಮಗ್ರಿ ವಿತರಣೆ ಮಾಡಿದ್ದಾರೆ.ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಶಾಲೆಯ ಮುಖ್ಯ ಗುರುಗಳಾದ ಮಹಮ್ಮದ್ ಅಜರುದ್ದಿನ್ ಅವರು ಮಾತನಾಡಿ ಅನಗತ್ಯ ಆಡಂಬರ ವೈಭವದ ಹುಟ್ಟುಹಬ್ಬದ ಆಚರಣೆ ಮಾಡಿ ಖರ್ಚು ಮಾಡುವ ಬದಲು ಹೀಗೆ ಅದರ ನೆನಪು ಅಚ್ಚಳಿಯದೆ ಉಳಿಯಲು ಸರ್ಕಾರಿ ಶಾಲೆ, ಕಾಲೇಜು, ಅನಾಥಶ್ರಮ, ವೃದ್ಧಾಶ್ರಮ, ಸರ್ಕಾರಿ ಆಸ್ಪತ್ರೆ ಸೇರಿದಂತೆ ಸಾರ್ವಜನಿಕ ಸೇವೆ ಅಗತ್ಯ ಇರುವೆಡೆ ಕೈಲಾದಷ್ಟು ಸೇವಾ ಮನೋಭಾವನೆ ತೋರಿಸುವ ಮೂಲಕ ಆಚರಿಸಿದರೆ ಅದರಿಂದ ದೊರಕುವ ಫಲ ಒಳಿತು ತರುತ್ತದೆ ಇಂತಹ ಕಾರ್ಯಗಳನ್ನು ಮಾಡುವ ಮೂಲಕ ಎಲ್ಲರೂ ಮಾದರಿ ಆಗಬೇಕು ಎಂದು ತಿಳಿಸಿ ಅವರ ಕುಟುಂಬಕ್ಕೆ ಶುಭಾಶಯ ತಿಳಿಸಿದರು.ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಗುರುಗಳಾದ ಮಹಮ್ಮದ್ ಅಜರುದ್ದಿನ್, ಶಿಕ್ಷಕರಾದ ಸೂರ್ಯ, ನರಸಿಂಹ, ಅಮರೇಶ್ ಶಿಕ್ಷಕಿಂಯರಾದ ನೀಲಮ್ಮ, ಅಂಬಮ್ಮ, ಶಾಲಾ ವಿದ್ಯಾರ್ಥಿಗಳು ಹಾಗೂ ಅವರ ತಾಯಿ, ತಮ್ಮ ಊರಿನ ಪ್ರಮುಖರು ಇದ್ದರು.

## ರೋಟರಿ ಕ್ಲಬ್ ವತಿಯಿಂದ ಸಸಿ ನೆಡುವ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್



ತಾಳಿಕೋಟೆ:ಪಟ್ಟಣದ ಗಣೇಶ ನಗರದಲ್ಲಿರುವ ಬಾಲಕಿಯರ ವಸತಿ ನಿಲಯದಲ್ಲಿ ಸ್ಥಳೀಯ ರೋಟರಿ ಸಂಸ್ಥೆಯ ವತಿಯಿಂದ ಸಸಿ ನೆಡುವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಸಸಿ ನೆಟ್ಟು ಮಾತನಾಡಿದ ನೂತನ ನೂತನ ಅಧ್ಯಕ್ಷ ಘನಶ್ಯಾಮ ಚವಾಣ, ನಮ್ಮ ಸಂಸ್ಥೆಯ ವತಿಯಿಂದ ಪರಿಸರ ಸಂರಕ್ಷಣೆಯ ಭಾಗವಾಗಿ ಸಸಿ ನೆಡುವ ಕಾರ್ಯಕ್ರಮ ಮಾಡುತ್ತಿದ್ದೇವೆ. ಆಯ್ದ ಸ್ಥಳಗಳಲ್ಲಿ ಪ್ರತಿ ತಿಂಗಳೂ ಸಸಿಗಳನ್ನು ನೆಡಲಾಗುತ್ತದೆ ಎಂದರು. ಇದರೊಂದಿಗೆ ಹಲವಾರು ಸಾಮಾಜಿಕ ಕಾರ್ಯಕ್ರಮಗಳನ್ನೂ ಆಯೋಜಿಸಲಿದ್ದು ಅದರಲ್ಲಿ ಉಚಿತ ಆರೋಗ್ಯ ಶಿಬಿರರ, ಆರೋಗ್ಯ ಜಾಗೃತಿ ಕಾರ್ಯಕ್ರಮ, ಶಾಲೆ–ಕಾಲೇಜುಗಳಿಗೆ ಶುದ್ಧ ಕುಡಿಯುವ ನೀರು, ಪುಸ್ತಕ, ಇತ್ಯಾದಿಗಳನ್ನೂ ನೀಡಲಿದ್ದೇವೆ ಎಂದರು.ತೋಟಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕ ಆರ್.ಎಸ್.ದೇಶಪಾಂಡೆ ಮಾತನಾಡಿ, ಪಟ್ಟಣದ ಉದ್ಯಾನಗಳಲ್ಲಿ ಸಸಿ ನೆಡುವಾಗ ಹಣ್ಣು, ಹೂವಿನ ಗಿಡಗಳ ಮಿಶ್ರಣವಿರಲಿ, ಜೊತೆಗೆ ಬಿಲ್ವಪತ್ರೆ ಮತ್ತು ಬೇಲದ ಹಣ್ಣಿನ ಗಿಡಗಳಿಗೂ ಆದ್ಯತೆ ನೀಡಿ ಎಂದು ಸಲಹೆ ನೀಡಿದರು. ರೋಟರಿಯನ್ ಅಶೋಕ ಬಳಗಾನೂರ, ಸ್ವಾಗತಿಸಿ, ನಿರ್ವಹಿಸಿದರು.ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಶ್ಯಾಮ ಹಂಚಾಟೆ, ರೋಟರಿಯನ್ನರುಗಳಾದ ಸಜೀವಕುಮಾರ ಹಜೇರಿ, ಶ್ರೀನಿವಾಸ ಸೋನಾರ, ಡಾ.ಎ.ಎ.ನಾಲಬಂದ, ಸುಭಾಸ ಬಬಲೇಶ್ವರ, ಸಿ.ಎಸ್. ಮಾಳಿ, ಪ್ರಭುಗೌಡ ಮದರಕಲ್ಲ, ಮಲ್ಲಿಕಾರ್ಜುನ ನಾಗರಾಳ , ಹಸಿರಸಂಪದ ಬಳಗದ ಸಂಚಾಲಕ ಎಸ್.ಎಸ್.ಗಡೇದ,ಅರಣ್ಯ ಇಲಾಖೆಯ ಗಸ್ತುಪಾಲಕ ಮಹಾಂತೇಶ ಹಾದಿಮನಿ, ಮಹಿಳಾ ವಸತಿ ನಿಲಯದ ವಾರ್ಡನ್ ಶಹನಾಜ ಮುದ್ದೇಬಿಹಾಳ ಇತರರಿದ್ದರು.

## ಕಡ್ಡಿ ಗುಡ್ಡಮಾಡುವುದೆ ವಿರೋಧ ಪಕ್ಷದ ಕೆಲಸ,ಅಭಿವೃದ್ಧಿ ಕಾಣುವುದಿಲ್ಲ: ಆರ್ ಬಸನಗೌಡ ತುರ್ವಿಹಾಳ

❑ ನೈಜ್ಯ ದೆಸೆ ನ್ಯೂಸ್

ಮಸ್ಕಿ ತಾಲ್ಲೂಕಿನ ಜೊಳದರಾಶಿಕ್ಯಾಂಪ ಮುಖ್ಯಕಾಲುವೆ 65 ರ ಗೇಟ್ ಸೆಟಾರ ಮತ್ತು ಗೂಗೆಬಾಳ ಹತ್ತಿರದ 71 ಮುಖ್ಯಕಾಲುವೆ ದೊಡ್ಡದಾದ ಬೊಂಗಾ ಬಿದ್ದಿದ್ದನ್ನು ವೀಕ್ಷಿಸಿದ ಶಾಸಕ ಆರ್ ಬಸನಗೌಡ ತುರ್ವಿಹಾಳ ಸ್ಥಳದಲ್ಲಿದ್ದ ನೀರಾವರಿ ಅಧಿಕಾರಿಗಳಿಗೆ ಆದಷ್ಟು ಬೇಗನೆ ದುರಸ್ತಿ ಇರುವ ಕೆಲಸವನ್ನು ಸರಿಪಡಿಸಿ , ಗುಣಮಟ್ಟ ಕಾಪಾಡಿಕೊಂಡು ಶೀಘ್ರವೇ ಕೆಲಸ ಮುಗಿಸಬೇಕು, ಐಸಿಸಿ ಸಭೆ ಇದೆ, ರೈತರಿಗೆ ನೀರು ಬಿಡಬೇಕು ಸಮಯ ಬಹಳಷ್ಟು ಆಗಿದೆ,ಅದಕ್ಕೆ ಅಧಿಕಾರಿಗಳು ಕರ್ತವ್ಯಲೋಪ ಎಸಗಿದೆ ರೈತರಿಗೆ ಅನುಕೂಲ ಮಾಡಿಕೊಡಬೇಕು ಎಂದು ಖಡಕ್ ಸಂದೇಶ ನೀಡಿದರು. ಹಾಗೆ ವಿರೊದ ಪಕ್ಷದವರಿಗೆ ಕಡ್ಡಿ ವಿಷಯನ ಗುಡ್ಡಮಾಡುವುದರಲ್ಲಿ ಪರಿಣಿತರು, ಅವರಿಗೆ ಕ್ಷೇತ್ರದಲ್ಲಿ ನಡೆದಿರುವ ಅಭಿವೃದ್ಧಿ ಕೆಲಸಗಳು ಕಣ್ಣಿಗೆ ಕಾಣುವುದಿಲ್ಲ,ಬರಿ ರಾಜಕೀಯ ಎಂದು ಹೇಳಿದರು. ಈ ಸಂದರ್ಭದಲ್ಲಿ ಮುಖಂಡರು,ನೀರಾವರಿ ಅಧಿಕಾರಿಗಳು ಇದ್ದರು.

❑ ಎರಡು ಸಲ ದುರಸ್ತಿಯಾದ ಮುಖ್ಯಕಾಲುವೆಗೆ ಬೇಟಿನೀಡಿ,ಅಧಿಕಾರಿಗಳಿಗೆ ಬೇಗನೆ ಸರಿಪಡಿಸಲು ತಿಳಿಸಿದ್ದೇನೆ".

– ಬಸನಗೌಡ ತುರ್ವಿಹಾಳ ಶಾಸಕ



❑ ಬೊಂಗಾಬಿದ್ದ ಸ್ಥಳದಲ್ಲಿ ಮುಂದೆ ಯಾವುದೇ ಸಮಸ್ಯೆಯಾಗದಂತೆ ಸರಿಪಡಿಸಲಾಗಿದೆ,ರೈತರಿಗೆ ಆತಂಕಬೇಡ....

–ವಿದ್ಯಾಸಾಗರ ಎಇಇ...

❑ ಬದೊಡ್ಡಮಟ್ಟದ ಬೊಂಗಾಬಿದ್ದಿದ್ದು, ಅಧಿಕಾರಿಗಳು ಮಣ್ಣು ತುಂಬಿದ್ದಾರೆ,ಮುಂದಿನ ಅನಾಹುತಕ್ಕೆ ಅಧಿಕಾರಿಗಳೆ ಹೊಣೆ...

–ವೀರೇಶಗೌಡ ಗೂಗೆಬಾಳ

## ನೇಮಕಾತಿ ಪ್ರಕಟಣೆ

□ KSRP, KSISF & RESERVE POLICE CONSTABLE ಹುದ್ದೆಗಳ ನೇಮಕಾತಿ:
Qualification: PUC
Last Date: 10–08–2026

□ KRIES ವಸತಿ ಶಾಲೆಗಳಲ್ಲಿನ 1,087 (767+320) ಶಿಕ್ಷಕರ ಹುದ್ದೆಗಳ ನೇಮಕಾತಿ:
Last Date: 13–08–2026

□ ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ 25 Clerk Cum Typist ಹುದ್ದೆಗಳ ನೇಮಕಾತಿ:
Qualification: PUC ( ಕನ್ನಡ & ಇಂಗ್ಲೀಷ್ ಕಿರಿಯ ದರ್ಜೆ ಬೆರಳಚ್ಚು ಪರೀಕ್ಷೆ ಉತ್ತೀರ್ಣರಾಗಿರಬೇಕು.)
Last Date: 17–08–2026

□ 18 ಶಾಖಾಧಿಕಾರಿ (Section Officer) ಹುದ್ದೆಗಳ ನೇಮಕಾತಿ:
Qualification: LLB
Last Date: 19–08–2026

□ 572 (505+67 HK) ಗ್ರಾಮ ಆಡಳಿತ ಅಧಿಕಾರಿಗಳ (VAO) ಹುದ್ದೆಗಳ ನೇಮಕಾತಿ:
Qualification: PUC
Last Date: 20–08–2026

□ 750 (560+190HK) ಭೂ ಮಾಪಕರು ( Land Surveyor ) ಹುದ್ದೆಗಳ ನೇಮಕಾತಿ
Qualification: BE / B.Tech / Degree (Some Subjects)/ Diploma
Last Date: 20–08–2026

□ ತುಮಕೂರು ಜಿಲ್ಲಾ ನ್ಯಾಯಾಲಯದಲ್ಲಿ Stenographers & Typist ಹುದ್ದೆಗಳ ನೇಮಕಾತಿ:
Qualification: PUC / ತತ್ಸಮಾನ ( ಕನ್ನಡ & ಇಂಗ್ಲೀಷ್ ಹಿರಿಯ ದರ್ಜೆ ಬೆರಳಚ್ಚು ಪರೀಕ್ಷೆ ಉತ್ತೀರ್ಣರಾಗಿರಬೇಕು.!!)
Last Date: 24–08–2026

□ 750 ಅರಣ್ಯ ವೀಕ್ಷಕ ಹುದ್ದೆಗಳನ್ನು ಯಾವುದೇ ಸ್ಪರ್ಧಾತ್ಮಕ ಪರೀಕ್ಷೆ ಇಲ್ಲದೇ ಖಖಐಅ ಅಂಕಗಳ ಮೆರಿಟ್ ಆಧಾರದ ಮೇಲೆ ನೇಮಕಾತಿ:
Last Date: 30–08–2026

□ 10 ಸಹಾಯಕ ತೋಟಗಾರಿಕಾ ನಿರ್ದೇಶಕರ & 75 ಸಹಾಯಕ ತೋಟಗಾರಿಕಾ ಅಧಿಕಾರಿ ಒಟ್ಟು 85 ಹುದ್ದೆಗಳ ನೇಮಕಾತಿ:
Qualification: PG in Horticulture / B.Sc in Horticulture
Last Date: 30–08–2026

□ 92 Pharmacy Officers & 90 Nursing Officer ಒಟ್ಟು 188 ಹುದ್ದೆಗಳ ನೇಮಕಾತಿ:
Qualification: Diploma in Pharmacy / Diploma in General Nursing
Last Date: 30–08–2026

□ 319 ಗೆಜೆಟೆಡ್ ಪ್ರೊಬೆಷನರ್ಸ್ (KAS) ಹುದ್ದೆಗಳ ನೇಮಕಾತಿ:
Qualification: Any Degree
Last Date: 31-08-2026

# ಪತ್ರಿಕಾ ರಂಗದಲ್ಲಿ ಪತ್ರಕರ್ತರು ಸಮಾಜಮುಖಿಯಾಗಿ ಇರಬೇಕು : ಶ್ರೀದೇವಿ ಆರ್ ನಾಯಕ

**ನೈಜ್ಯ ದೆಸೆ ನ್ಯೂಸ್**

ಅರಕೇರಾ ಅರಕೇರಾ ಪಟ್ಟಣದಲ್ಲಿನ ರಾಷ್ಟ್ರೀಯ ಮಹಿಳಾ ಕಾಂಗ್ರೆಸ್ ಕಾರ್ಯದರ್ಶಿ ಶ್ರೀದೇವಿ ರಾಜಶೇಖರನಾಯಕ ಅವರ ನಿವಾಸದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಇತ್ತೀಚಿಗೆ ದೇವದುರ್ಗ ತಾಲೂಕು ಮಟ್ಟದ ಪ್ರಶಸ್ತಿಗೆ ಭಾಜನರಾಗಿ ಪ್ರಶಸ್ತಿ ಸ್ವೀಕರಿಸಿದ ಅರಕೇರಾ ತಾಲೂಕು ಸಂಯುಕ್ತಕರ್ನಾಟಕ ವರದಿಗಾರರು ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಯಚೂರು ಜಿಲ್ಲಾಘಟಕದ ಉಪಧ್ಯಕ್ಷರಾದ ಸೂಗೂರೇಶ್ವರ ಎಸ್ ಗುಡಿಯವರಿಗೆ ಮತ್ತು ಅರಕೇರಾ ತಾಲೂಕು ಉದಯವಾಣಿವರದಿಗಾರದ ಅಜ್ಮೀರ್ ನದಾಫ್ ಅವರನ್ನು ಸನ್ಮಾನಿಸಿ ಗೌರವಿಸಿದರು.ಈ ಸಂದರ್ಭದಲ್ಲಿ ಮಾತನಾಡಿದ ಶ್ರೀದೇವಿ ರಾಜಶೇಖರನಾಯಕ ಪತ್ರಿಕಾ



ಮಾಧ್ಯಮವು ಸಮಾಜದ ಕನ್ನಡಿಯಾಗಿದ್ದು ಪ್ರಜಾಪ್ರಭುತ್ವದ ನಾಲ್ಕನೇ ಸ್ತಂಭವಾಗಿ ಕಾರ್ಯನಿರ್ವಹಿಸುತ್ತದೆ. ಇದು ಜನ-ರಿಗೆ ನಿಖರವಾದ ಸುದ್ದಿ,ಮಾಹಿತಿ,ಜಾಗೃತಿ ಮತ್ತು ಶಿಕ್ಷಣವನ್ನು ನೀಡುವ ಮೂಲಕ ಸರಕಾರದ ನೀತಿಗಳು ಮತ್ತು ಸಾಮಾಜಿ-ಕ ಸಮಸ್ಯೆಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವದು ಮಧ್ಯಮಗಳ ಪಾತ್ರವಾಗಿದೆ ಎಂದು ಶ್ರೀದೇವಿನಾಯಕ ಆರ್ ನಾಯಕರವರು ಹೇಳಿದರು.ವರಿಗಾರರು ಸಮಾಜದಲ್ಲಿ ಯಾವುದೇ ಆಸೆ ಆಮಿಷಗಳಿಗೆ ಒಳಗಾಗದೆ ತಮ್ಮ ಜೀವ ಪಣಕ್ಕಿಟ್ಟು ವರದಿ ಮಾಡುತ್ತಿದ್ದಾರೆ. ದಿನನಿತ್ಯದ ನಡೆಯುವ ಘಟನೆಗಳ ಬಗ್ಗೆ ಹಾಗೂ ಸಾರ್ವಜನಿಕರ ಸಮಸ್ಯೆಗಳನ್ನು ಸರಕಾರಕ್ಕೆ ತಲುಪಿಸುವ ಜವಾಬ್ದಾರಿಯನ್ನು ಹೊಂದಿದ್ದಾರೆ. ಅವರು ನ್ಯಾಯಯುತವಾಗಿ ಪಕ್ಷಾತೀತವಾಗಿ ಕೆಲಸ ಮಾಡಿದಾಗ ಮಾತ್ರ ಪತ್ರಕರ್ತರ ವೃತ್ತಿಗೆ ಒಳ್ಳೆಯ ಗೌರವ ಸಿಗುತ್ತದೆ ಎಂದರು. ಪತ್ರಕರ್ತರ ಸಮಸ್ಯೆಗಳಿಗೆ ನಾನು ಕೂಡ ಯವಾಗಲು ಬೆಂಬಲವಾಗಿ ನಿಮ್ಮ ಜೋತೆಗೆ ಇರುತ್ತೇನೆ,ಏನೇಸಮಸ್ಯೆಗಳುಇದ್ದರು ನನ್ನನ್ನು ಬೇಟಿಮಾಡಿರಿ ಎಂದುಹೇಳಿದರು.ಈ ವೇಳೆ ಕಾಂಗ್ರೆಸ್ ಪಕ್ಷದ ಮುಖಂಡರುಗಳಾದ ರಾಮನಗೌಡದೊರೆ,ನಿಂಗಪ್ಪಬೋಜೆ,ವೆಂಕೆ ೞಬನಾಯಕ್,ಮಲ್ಲಪ್ಪಕಬ್ಬೇರ,ಯಕಬಾಲ ಸಾಬ,ಯುಸುಬಸಾಬ ಸೇರಿದಂತೆ ಕಾಂಗ್ರೆಸ್ ಕಾರ್ಯಕರ್ತರು ಪತ್ರಕರ್ತರು ಉಪಸ್ಥಿತರಿದ್ದರು.

# ತಾಲೂಕನ್ನು ಬರಪೀಡಿತ ಪ್ರದೇಶವೆಂದು ಘೋಷಿಸಲು ಸಚಿವರಿಗೆ ರೈತ ಸಂಘದಿಂದ ಆಗ್ರಹ

**ನೈಜ್ಯ ದೆಸೆ ನ್ಯೂಸ್**

ಲಿಂಗಸಗೂರು : ಹಟ್ಟಿ ಚಿನ್ನದ ಗಣಿ,ಲಿಂಗಸಗೂರು ತಾಲೂಕಿನಲ್ಲಿ ಮಳೆ ಅಭಾವ ಹಾಗೂ ಹವಾಮಾನ ವೈಪರೀತ್ಯದಿಂದ ಮುಂಗಾರು ಬೆಳೆಗಳು ಸಂಪೂರ್ಣ ಒಣಗಿಹೋಗಿದ್ದು, ಲಿಂಗಸಗೂರು ಹಾಗೂ ಮಸ್ಕಿ ತಾಲೂಕುಗಳನ್ನು ತಕ್ಷಣವೇ ಬರಪೀಡಿತ ಪ್ರದೇಶ ಎಂದು ಘೋಷಿಸಿ, ಎಕರೆಗೆ 50,000 ರೂ. ಪರಿಹಾರ ಮಂಜೂರು ಮಾಡಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡರು ಸಚಿವ ಡಾ. ಅಜಯ್ ಧರ್ಮಸಿಂಗ್ ರವರಿಗೆ ಮನವಿ ಸಲ್ಲಿಸಿದರು.ಪಟ್ಟಣದಲ್ಲಿ ಸಚಿವ ಡಾ.ಅಜಯ್ ಧರ್ಮಸಿಂಗ್ ಅವರಿಗೆ ಮನವಿ ಸಲ್ಲಿಸಿದ ರೈತ



ಮುಖಂಡರು, ರೈತರ ವಿವಿಧ ಹಕ್ಕೋತ್ತಾಯಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ.ಬಿತ್ತನೆ ಮಾಡಿದ ಬೀಜ, ರಸಗೊಬ್ಬರ ಹಾಗೂ ಕೃಷಿ ವೆಚ್ಚ ಭರಿಸಲಾಗದೆ ರೈತರು ತೀವ್ರ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ. ಬೆಳೆ ಉಳಿವಿಗಾಗಿ ಪಂಪ್‌ಸೆಟ್‌ಗಳಿಗೆ ನಿರಂತರ 7 ಗಂಟೆಗಳ ಕಾಲ ವಿದ್ಯುತ್ ಪೂರೈಸಬೇಕು ಮತ್ತು ತಕ್ಷಣವೇ ರಸಗೊಬ್ಬರ ಕೊರತೆಯನ್ನು ನೀಗಿಸಬೇಕು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತರ ಸಂಪೂರ್ಣ ಕೃಷಿ ಸಾಲವನ್ನು ಮನ್ನಾಮಾಡಬೇಕು. ಜಿಪಿಎಸ್ ಲೋಪದೋಷಗಳನ್ನು ಸರಿಪಡಿಸಿ ಬೆಳೆ ವಿಮೆ ಹಣವನ್ನು ಪಾರದರ್ಶಕವಾಗಿ ಅರ್ಹ ರೈತರ ಖಾತೆಗೆ ಜಮಾ ಮಾಡಬೇಕು ಹಾಗೂ ವಿಮೆ ಭರ್ತಿ ಮಾಡಲು ಆಗಸ್ಟ್ 15 ರವರೆಗೆ ಕಾಲಾವಕಾಶ ವಿಸ್ತ-ರಿಸಬೇಕು.ಗುಜರಾತ್ ಮೂಲದ ಕಂಪನಿಯಿಂದ ಪೂರೈಕೆಯಾದ ಷರತ್ ಕಿಂಗ್ ದಾಳಿಂಬೆ ತಳಿಯಲ್ಲಿ ಕಲಬೆರಕೆಯಾಗಿ ರೈತರು ಭಾರಿ ನಷ್ಟ ಅನುಭವಿಸಿದ್ದು, ಸಂಬಂಧಿತ ಕಂಪನಿಯ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕೆಂದು ರೈತ ಸಂಘದ ಮುಖಂಡರಾದ ಮಲ್ಲಣ್ಣ ಕೋಳೂರು, ಬಸನಗೌಡ ಹುಡೇದ್ ಮಟ್ಟೂರು ಹಾಗೂ ಈರಣ್ಣ ಗುಡಿಹಾಳ ಸೇರಿದಂತೆ ಆಗ್ರಹಿಸಿದ್ದಾರೆ.

# ಸಾರ್ವಜನಿಕರ ಆಸ್ತಿ ವರ್ಗಾವಣೆ ಆರೋಪ: ಶಾನವಾಜ್ ಸುಲೇಮಾನ್ ಗೆ ನೋಟಿಸ್ ಜಾರಿ

**ನೈಜ್ಯ ದೆಸೆ ನ್ಯೂಸ್**

ಲಿಂಗಸಗೂರು, :ಸಾರ್ವಜನಿಕರ ಆಸ್ತಿಯನ್ನು ಅನಧಿಕೃತವಾಗಿ ವರ್ಗಾವಣೆ ಮಾಡಿಕೊಂಡಿರುವುದು, ನ್ಯಾಯಾಲಯದ ತಡೆ ಯಾಜ್ಞೆಯನ್ನು ಉಲ್ಲಂಘಿ ಸಿರುವುದು ಹಾಗೂ ಕರ್ತವ್ಯ ಲೋಪ ಎಸಗಿರುವ ಆರೋಪ ಗಳ ಹಿನ್ನೆಲೆಯಲ್ಲಿ ಲಿಂಗಸಗೂರು ಪುರಸಭೆಯ ಸಿಬ್ಬಂದಿ ಶಾನವಾಜ್ ಸುಲೇಮಾನ್ ಗೆ ಮುಖ್ಯಾಧಿಕಾರಿಗಳು ಕಾರಣ ಕೇಳಿ ನೋಟಿಸ್ ಜಾರಿಗೊಳಿಸಿದ್ದಾರೆ. ಆಗಸ್ಟ್ 6, 2026ರಂದು ಹೊರಡಿಸಿರುವ ನೋಟಿಸ್‌ನಲ್ಲಿ, ಲಾಲ್ ಅಹ್ಮದ್ ಅವರ ದೂರು, ಲಿಂಗಸಗೂರು ಪೊಲೀಸ್ ಠಾಣಾ ಗುನ್ನ 231/2026 ಹಾಗೂ ಹೆಚ್ಚುವರಿ ನ್ಯಾಯಾಲಯದ ಮೂಲದಾವೆ ಸಂಖ್ಯೆ 104/: 2026 ರ ತಡೆಯಾಜ್ಞೆ ಆದೇಶ ವನ್ನು ಉಲ್ಲೇಖಿಸಲಾಗಿದೆ. ಠಾಣೆಯ ಮೊಕದ್ದಮೆ ಸಂಖ್ಯೆ ನೋಟಿಸ್ ಪ್ರಕಾರ, ಸಂಬಂಧ ಪಟ್ಟ ಸಿಬ್ಬಂದಿ ತಮ್ಮ ಸೇವಾ ಅವಧಿಯಲ್ಲಿ ಅಧಿಕಾರ ದುರು ಪಯೋಗ



ಪಡಿಸಿಕೊಂಡು, ಸಾರ್ವಜನಿಕರಿಗೆ ಸೇರಿದ ಹಳೆ ಮನೆಯನ್ನು ಯಾವುದೇ ಕಾನೂನು ಬದ್ಧದಾಖಲೆ ಗಳಿಲ್ಲದೆ ತಮ್ಮ ತಾಯಿಯ ಹೆಸರಿಗೆ ಅನಧಿಕೃ ತವಾಗಿ ವರ್ಗಾವಣೆ ಮಾಡಿ ಕೊಂಡಿದ್ದಾರೆ ಎಂಬ ಆರೋಪ ಕೇಳಿಬಂದಿದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕ್ರಿಮಿನಲ್ ಪ್ರಕರಣವೂ ದಾಖಲಾಗಿದ್ದು ತನಿಖೆ ಮುಂದುವರಿದಿದೆ ಎಂದು ತಿಳಿಸಲಾಗಿದೆ.ಇದೇ ವೇಳೆ, ನ್ಯಾಯಾಲಯದ ತಡೆಯಾಜ್ಞೆ ಜಾರಿಯಲ್ಲಿದ್ದರೂ ಆಸ್ತಿಯಲ್ಲಿ ಹಸ್ತಕ್ಷೇಪ ನಡೆಸಿರುವುದು, ಮೂಲ ಮಾಲೀಕರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಜೀವ ಬೆದರಿಕೆ ಹಾಕಿರುವ ಆರೋಪಗಳೂ ನೋಟಿಸ್‌ನಲ್ಲಿ ಉಲ್ಲೇಖಗೊಂಡಿದ್ದು . ಈ ಕೃತ್ಯಗಳು ಕರ್ನಾಟಕ ನಾಗರಿಕ ಸೇವಾ ನಿಯಮಗಳ ಉಲ್ಲಂಘ ನೆಯಾಗಿದ್ದು, ಇಲಾಖೆಯ ಘನತೆ ಮತ್ತು ಗೌರವಕ್ಕೆ ಧಕ್ಕೆ ತಂದಿವೆ ಎಂದು ಮುಖ್ಯಾಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ. ಸಂಬಂಧ ಪಟ್ಟ ಸಿಬ್ಬಂದಿ ಶಾನವಾಜ್ ಸುಲೇಮಾನ್ ಸ್ವೀಕರಿಸಿದ ಏಳು ದಿನಗಳೊಳಗೆ ಖುದ್ದಾಗಿ ಹಾಜರಾಗಿ ಲಿಖಿತ ಸಮರ್ಥ-ನೆ ಸಲ್ಲಿಸುವಂತೆ ಸೂಚಿಸಲಾಗಿದೆ ಎಂದು ತಿಳಿದು ಬಂದಿದೆ

# ಮುಖಂಡರ ಷಡ್ಯಂತರಗಳಿಂದ ಪಕ್ಷಕ್ಕೆ ಭಾರಿ ನಷ್ಟ: ಮುಖಂಡ ಪಾಟೀಲ

**ನೈಜ್ಯ ದೆಸೆ ನ್ಯೂಸ್**



ತಾಳಿಕೋಟಿ: ವಿಜಯಪುರ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಕಟ್ಟಿ ಬೆಳೆಸುವಲ್ಲಿ ಅತ್ಯಂತ ಪ್ರಮುಖ ಪಾತ್ರವಹಿಸಿದ ಶಾಸಕ ಅಪ್ಪಾಜಿ ನಾಡಗೌಡರಿಗೆ ಸಚಿವ ಸ್ಥಾನ ಕೊಡದೆ ಇರುವುದು ಪಕ್ಷದಲ್ಲಿ ನಿಷ್ಠಾವಂತರಿಗೆ ಬೆಲೆ ಇಲ್ಲ ಎಂಬುದು ತಿಳಿದು ಬರುತ್ತದೆ ಎಂದು ಕೆಪಿಸಿಸಿ ಮಾಜಿ ಸದಸ್ಯ, ಹಿರಿಯ ಮುಖಂಡ ಬಿ ಎಸ್ ಪಾಟೀಲ ಯಾಳಗಿ ಅವರು ವರಿಷ್ಠರ ತೀರ್ಮಾನದ ಕುರಿತು ತೀವ್ರ ಬೇಸರವನ್ನು ವ್ಯಕ್ತಪಡಿಸಿದರು. ಶನಿವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ತಾಳಿಕೋಟಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ಕರೆದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ ಶಾಸಕ ನಾಡಗೌಡರು ಒಬ್ಬ ಸರಳ ಸಜ್ಜನ ರಾಜಕಾರಣಿ, ಅವ-ರಿಗೆ ಸತತ ಮೂರು ಅವಧಿಗಳಿಂದ ಸಚಿವ ಸ್ಥಾನದ ಭರವಸೆ ಕೊಟ್ಟು ವಂಚಿಸಲಾಗುತ್ತಿದೆ ಇದು ನಿಜಕ್ಕೂ ನೋವಿನ ಸಂಗತಿ. ಪರಿಸ್ಥಿತಿ ಇದೇ ರೀತಿ ಮುಂದುವರೆದರೆ ಕಾಂಗ್ರೆಸ್ ಪಕ್ಷಕ್ಕೆ ಮುಂದಿನ ದಿನಗಳಲ್ಲಿ ದೊಡ್ಡ ಹೊಡೆತ ಬೀಳುತ್ತದೆ. ಕೇಂದ್ರದ ವರಿಷ್ಠರ ಈ ತೀರ್ಮಾನ ನಿಜಕ್ಕೂ ದೂರದೃಷ್ಟಕರ, ನಮ್ಮ ಸಹನೆಗೂ ಒಂದು ಮಿತಿ ಇದೆ ಅದನ್ನು ಪದೇ ಪದೇ ಪರೀಕ್ಷಿಸುವುದು ಒಳ್ಳೆಯದಲ್ಲ ಎಂದು ಎಚ್ಚರಿಕೆ ನೀಡಿದರು. ಮುಸ್ಲಿಂ ಧಾರ್ಮಿಕ ಮುಖಂಡ ಸಯ್ಯದ ಶಕೀಲ ಅಹಮದ್ ಖಾಜಿ ಅವರು ಮಾತನಾಡಿ ಶಾಸಕ ಅಪ್ಪಾಜಿ ನಾಡಗೌಡ-ರಿಗೆ ಸಚಿವ ಸ್ಥಾನದಿಂದ ವಂಚಿಸಿ ಭಾರಿ ಅನ್ಯಾಯ ಮಾಡಲಾಗಿದೆ ಇದು ನಮ್ಮಂತಹ ಪಕ್ಷದ ನಿಷ್ಠಾವಂತ ಕಾರ್ಯಕರ್ತರಿಗೆ ಬಹಳ ನೋವುಂಟು ಮಾಡಿದೆ. ಪಕ್ಷ ಅವರ ಅನುಭವ ಹಾಗೂ ಹಿರಿತನವನ್ನು ಪರಿಗಣಿಸಬೇಕಾಗಿತ್ತು . ಇದರಲ್ಲಿ ಯಾವುದೋ ಕಾಣದ ಕೈಗಳು ಕೆಲಸ ಮಾಡಿವೆ ಎಂಬುದು ಗೊತ್ತಾಗುತ್ತದೆ ಎಂದರು. ಯುವ ಮುಖಂಡ ಪ್ರಭುಗೌಡ ಮದರಕಲ್ಲ ಮಾತನಾಡಿ ಅಪ್ಪಾಜಿ ನಾಡಗೌಡರು ಆರು ಬಾರಿ ಶಾಸಕರಾಗಿ ಒಂದು ಬಾರಿ ಸಚಿವರಾಗಿ ಸಮರ್ಥವಾಗಿ ಕಾರ್ಯ ಮಾಡಿದ ನಾಯಕರು. ಭಾರಿ ನಷ್ಟದಲ್ಲಿದ್ದ ಕೆ ಎಸ್ ಡಿ ಎಲ್ ನಿಗಮವನ್ನು ಲಾಭದಾಯಕ ರೀತಿಯಲ್ಲಿ ನಡೆಸಿದ ನಾಯಕರು,ರಾಜ್ಯಮಟ್ಟದಲ್ಲಿ ಸ್ವಪಕ್ಷದಿಂದ ಮಾತ್ರವಲ್ಲ ಅನ್ಯ ಪಕ್ಷಗಳ ನಾಯಕರಿಂದಲೂ ಗೌರವಿಸಲ್ಪಡುವ ವ್ಯಕ್ತಿಯಾಗಿದ್ದಾರೆ. ಈ ಬಾರಿಯ ಸಂಪುಟದಲ್ಲಿ ಕೆಲವು ಅನುಭವ ಇಲ್ಲದ ಶಾಸಕರಿಗೆ ಸಚಿವ ಸ್ಥಾನ ನೀಡಲಾಗಿದೆ. ಆದರೆ ಹಿರಿಯ ಶಾಸಕರ ಹಿರಿತನವನ್ನು ಪರಿಗಣಿಸಿಲ್ಲ. ಸಂಪುಟದಲ್ಲಿ ಇನ್ನೂ ಒಂದು ಸ್ಥಾನ ಖಾಲಿ ಇದೆ ಇದನ್ನು ಅಪ್ಪಾಜಿ ನಾಡಗೌಡರಿಗೆ ಕೊಡಬೇಕೆಂಬುದು ನಮ್ಮೆಲ್ಲರ ಒಕ್ಕೊರಲಿನ ಆಗ್ರಹವಾಗಿದೆ ಎಂದರು. ಪತ್ರಿಕಾ ಗೋಷ್ಠಿಯಲ್ಲಿ ತಾಳಿಕೋಟಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಕೆ.ಚೋರಗಸ್ತಿ, ಮುಖಂಡರಾದ ಎಂ.ಜಿ.ಪಾಟೀಲ, ಸಿದ್ದನಗೌಡ ಪಾಟೀಲ(ನಾವದಗಿ), ಬಿ.ಎನ್.ಹಿಪ್ಪರಗಿ, ಸಂಗನಗೌಡ ಅಸ್ಕಿ, ಬಸನಗೌಡ ಜೈನಾಪೂರ, ಮಲ್ಲನಗೌಡ ಯಾದಗಿರಿ, ಬಸನಗೌಡ ನಾಡಗೌಡ, ಮುಸ್ಲಿಂ ಬ್ಯಾಂಕ್ ಅಧ್ಯಕ್ಷ ಮಹೆಬೂಬ ಕೆಂಭಾವಿ, ನೀಲಮ್ಮಗೌಡ್ತಿ ಪಾಟೀಲ, ಮೋದಿನಸಾ ನಗಾರ್ಚಿ, ಮುನ್ನಾ ಅರ್ಜುಣಗಿ, ಫಯಾಜ ಉತ್ನಾಳ, ರಫೀಕ ಬೇಪಾರಿ, ಕಾಸೀಮ ಅಬಾಲೆ, ಆಸಿಫ್ ಕೆಂಭಾವಿ, ಗೋಪಾಲ ಕಟ್ಟಿಮನಿ,ಮೊಯೀನ ಮನಗೂಳಿ,ಬಬ್ಲು ಕೆಂಭಾವಿ ಮತ್ತಿತರರು ಇದ್ದರು.

# ಶೇರುದಾರರು ಬ್ಯಾಂಕಿನ ನಿಜವಾದ ಮಾಲೀಕರು:ಕೆಂಭಾವಿ

**ನೈಜ್ಯ ದೆಸೆ ನ್ಯೂಸ್**







ತಾಳಿಕೋಟಿ: ಬ್ಯಾಂಕಿನಿಂದ ಸಾಲ ಪಡೆದವರು ಸಕಾಲಿಕವಾಗಿ ತಮ್ಮ ಸಾಲವನ್ನು ಮರುಪಾವತಿ ಮಾಡಿದರೆ ಬ್ಯಾಂಕಿನ ಪ್ರಗತಿಗೆ ಅನುಕೂಲವಾಗುತ್ತದೆ ಎಂದು ಅಧ್ಯಕ್ಷ ಮಹಬೂಬ ಕೆಂಭಾವಿ ಹೇಳಿದರು. ಪಟ್ಟಣದ ಇದಗಾ ಶಾದಿ ಮಹಲ್ ನಲ್ಲಿ ಹಮ್ಮಿಕೊಂಡ ದಿ ಮುಸ್ಲಿಂ ಕೋ ಆಪರೇಟಿವ್ವ ಬ್ಯಾಂಕ್ ಲಿ. ಇದರ 90ನೇ ವಾರ್ಷಿಕ ಸರ್ವ ಸಾಧಾರಣ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಶೇರುದಾರರು ಬ್ಯಾಂಕಿನ ನಿಜವಾದ ಮಾಲೀಕರಾಗಿದ್ದಾರೆ ಅವರ ಸಹಕಾರದಿಂದಲೇ ಬ್ಯಾಂಕಿನ ಅಭಿವೃದ್ಧಿ ಸಾಧ್ಯವಾಗಿದೆ ಎಂದರು. ನಿರ್ದೇಶಕ ಎಂ.ಕೆ. ಮನ್ನೂರ ಅವರು ಮಾತನಾಡಿ ಈ ಬ್ಯಾಂಕು ಇಂದು ತನ್ನ 90ನೇ ಸಂವತ್ಸರಗಳನ್ನು ಪೂರ್ಣಗೊಳಿಸಿ ಜಿಲ್ಲೆಯಲ್ಲಿರುವ ಪ್ರತಿಷ್ಠಿತ ಸಹಕಾರಿ ಬ್ಯಾಂಕುಗಳಲ್ಲಿ ಒಂದಾಗಿದೆ. ಬ್ಯಾಂಕಿನ ಈ ಬೆಳವಣಿಗೆಗೆ ಶೇರುದಾರರು ಬ್ಯಾಂಕಿನ ಮೇಲೆ ಇಟ್ಟ ಪ್ರೀತಿ ವಿಶ್ವಾಸ ಹಾಗೂ ಸಹಕಾರವೇ ಕಾರಣವಾಗಿದೆ ಅದು ಮುಂದೆಯೂ ಹೀಗೆಯೇ ಇರಲಿ ಎಂದರು. ನಿರ್ದೇಶಕರಾದ ಮುನ್ನಾ ಅರ್ಜುಣಗಿ ಮಾತನಾಡಿ ನಮ್ಮ ಬ್ಯಾಂಕು ಪ್ರಸಕ್ತ ಸಾಲಿನಲ್ಲಿ 49.99 ಲಕ್ಷ ನಿವ್ವಳ ಲಾಭಗಳಿಸಿದೆ. ಗ್ರಾಹಕರ ಸಹಕಾರದಿಂದಲೇ ಇದು ಸಾಧ್ಯವಾಗಿದೆ. ಈ ಬ್ಯಾಂಕು ಸಮುದಾಯದ ಬ್ಯಾಂಕ್ ಆಗಿರುವುದರಿಂದ ನಿಮ್ಮೆಲ್ಲರ ವಿಶೇಷ ಕಾಳಜಿ ಇದರ ಮೇಲೆ ಇರಲಿ ಎಂದರು. ನಿರ್ದೇಶಕರಾದ ಮೊಹಮ್ಮದ್ ಶಫೀಕ್ ಇನಾಮದಾರ, ತನ್ವೀರ್ ಮನಗೂಳಿ, ಚಂದಾಹುಸೇನ ಖಾಂಜಾದೆ, ವೃತ್ತಿಪರ ನಿರ್ದೇಶಕ ಎ.ಎಂ.ಹಿಪ್ಪರಗಿ ಮಾತನಾಡಿದರು. ಶೇರುದಾರರಾದ ಎ. ಎಸ್.ನಮಾಜಕಟ್ಟಿ, ಅಲ್ಲಾಭಕ್ಷ ಚಳ್ಳಿ ಗಿಡದ ಹಾಗೂ ಮುದ್ದು ಪಟೇಲ ಅವರು ತಮ್ಮಸಲಹೆ ಸೂಚನೆಗಳನ್ನು ನೀಡಿದರು. ಇದೆ ವೇಳೆ ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿಯಲ್ಲಿ ಹೆಚ್ಚಿನ ಅಂಕ ಪಡೆದು ಪಾಸಾದ ಬ್ಯಾಂಕ್ ನ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಬ್ಯಾಂಕಿನ ಹಿರಿಯ ಶೇರುದಾರರಿಗೆ ಸನ್ಮಾನಿಸಿ ಗೌರವಿಸಲಾಯಿತು. ಬ್ಯಾಂಕಿನ ವ್ಯವಸ್ಥಾಪಕ ಎಲ್.ಆರ್. ನಾಗೂರ ವರದಿ ವಾಚಿಸಿದರು. ಸಹಾಯಕ ವ್ಯವಸ್ಥಾಪಕ ಎಚ್ ಎಮ್ ಹಂಡೇಬಾಗ ನಿರೂಪಿಸಿದರು. ಮಾರಾಟಾಧಿಕಾರಿ ಆರ್.ಕೆ.ನಡುವಿನಮನಿ ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಉಪಾಧ್ಯಕ್ಷರಾದ ಸಕೀನಾಬಿ ಲಾಹೋರಿ, ನಿರ್ದೇಶಕರುಗಳಾದ ಫಯಾಜ ಉತ್ನಾಳ, ಸಿಕಂದರಭಾಷಾ ಡೋಣಿ, ದಾದೇಪೀರ ಚೌದ್ರಿ, ಮೊಹಮ್ಮದ್ ಆದಾಮ್ ಅತ್ತಾರ, ರಫೀಕ ಬೇಪಾರಿ, ಮಾಜಾನಬಿ ಚನ್ನೂರ, ವೃತ್ತಿಪರ ನಿರ್ದೇಶಕ ಎ.ಎಂ.ಹಿಪ್ಪರಗಿ, ಸಮಾಜದ ಗಣ್ಯರಾದ ಅಬ್ದುಲ್ ಗನಿಸಾಬ ಲಾಹೋರಿ, ಮಾಸೂಮಸಾಬ ಕೆಂಭಾವಿ, ಹಸನಸಾಬ ಮನಗೂಳಿ, ಆದಮಸಾಬ ಕೊಡೆಕಲ್, ಬ್ಯಾಂಕಿನ ಶೇರುದಾರರು ಹಾಗೂ ಸಿಬ್ಬಂದಿಗಳು ಇದ್ದರು.

**ಶಿಕ್ಷಣ ಮಾರ್ಗದರ್ಶಿ ವಿಶೇಷ**

## ಎಂ ಎಸ್ ಡಬ್ಲು (MSW)

**MSW (Master of Social Work)** ಎಂದರೆ ಸಮಾಜ ಕಾರ್ಯದಲ್ಲಿ ಸ್ನಾತಕೋತ್ತರ ಪದವಿ (ಮಾಸ್ಟರ್ ಡಿಗ್ರಿ). ಸಮಾಜದ ವಿವಿಧ ವರ್ಗಗಳ ಸಮಸ್ಯೆಗಳನ್ನು ಅರ್ಥಮಾಡಿಕೊಂಡು, ಅವರಿಗೆ ಅಗತ್ಯವಾದ ನೆರವು ಮತ್ತು ಸೇವೆ ಒದಗಿಸುವ ಕ್ಷೇತ್ರದಲ್ಲಿ ವೃತ್ತಿ ಮಾಡಲು ಈ ಕೋರ್ಸ್ ಸಹಾಯಕವಾಗಿದೆ.

□ ಕೋರ್ಸ್ ಅವಧಿ

ಸಾಮಾನ್ಯವಾಗಿ 2 ವರ್ಷ

4 ಸೆಮಿಸ್ಟರ್‌ಗಳು

ತರಗತಿ ಶಿಕ್ಷಣದ ಜೊತೆಗೆ **Field Work / Internship** ಇರುತ್ತದೆ.

□ ಯಾರು **MSW** ಮಾಡಬಹುದು?

ಸಾಮಾನ್ಯವಾಗಿ ಯಾವುದೇ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಯಾವುದೇ ಪದವಿ **(Graduation)** ಪೂರ್ಣಗೊಳಿಸಿದವರು **MSWUÉ** ಅರ್ಜಿ ಸಲ್ಲಿಸಬಹುದು. ಆದ–ರೆ ಪ್ರವೇಶ ಅರ್ಹತೆ ವಿಶ್ವವಿದ್ಯಾಲಯದ ನಿಯಮದಂತೆ ಬದಲಾಗಬಹುದು.

□ **MSW**ನಲ್ಲಿ ಕಲಿಸುವ ಪ್ರಮುಖ ವಿಷಯಗಳು

ಸಮಾಜ ಕಾರ್ಯದ ಮೂಲಭೂತ ಪರಿಕಲ್ಪನೆಗಳು

**Community Development**
**Social Welfare Administration**
**Human Resource Management**
**Counselling**
**Medical & Psychiatric Social Work**
ಮಹಿಳಾ ಮತ್ತು ಮಕ್ಕಳ ಕಲ್ಯಾಣ
ಗ್ರಾಮೀಣ ಅಭಿವೃದ್ಧಿ
**NGO Management**
ಸಾಮಾಜಿಕ ಸಂಶೋಧನಾ ವಿಧಾನಗಳು

□ **MSW** ಯಾಕೆ ಆಯ್ಕೆ ಮಾಡಬೇಕು?

ಸಮಾಜ ಸೇವೆಯ ಆಸಕ್ತಿ + ಜನರೊಂದಿಗೆ ಕೆಲಸ ಮಾಡುವ ಸಾಮರ್ಥ್ಯ + ವೃತ್ತಿಪರ ಶಿಕ್ಷಣ □ ಈ ಮೂರು ಕ್ಷೇತ್ರಗಳನ್ನು ಒಟ್ಟಿಗೆ ಬೆಸೆಯುವ ಉತ್ತಮ ಸ್ನಾತಕೋತ್ತರ ಕೋರ್ಸ್ **MSW.**

## ಕಾಕ್ರೋಚ್ ಜನತಾ ಪಾರ್ಟಿ' ಮುನ್ನಡೆಸುವ 12 ಮಂದಿ

□ ನೈಜ್ಯ ದೆಸೆ ನ್ಯೂಸ್



ಜಂತರ್ ಮಂತರ್‌ನ 36 ದಿನಗಳ ಪ್ರತಿಭಟನೆಯ ಬಳಿಕ 'ಕಾಕ್ರೋಚ್ ಜನಪಾ ಪಾರ್ಟಿ' (ಸಿಜೆಪಿ) ಸಂಘಟನೆ ವಿಸ್ತರಣೆಗೆ ಮುಂದಾಗಿದೆ. ಪತ್ರಿಕೋದ್ಯಮ, ತಂತ್ರಜ್ಞಾನ, ಕಾನೂನು, ಸಾರ್ವಜನಿಕ ನೀತಿ, ಹಣಕಾಸು ಹಾಗೂ ಉದ್ಯಮ ಕ್ಷೇತ್ರದಲ್ಲಿ ತೊಡಗಿರುವ ಯುವಜನರಿಗೆ ಪ್ರಮುಖ ಹೊಣೆಗಾರಿಕೆ ನೀಡಿದೆ. ಮುಂದಿನ ಆರು ತಿಂಗಳ ಕಾಲ ಸಂಘಟನೆಯನ್ನು ಮುನ್ನಡೆಸಲಿರುವ 12 ಸದಸ್ಯರ ತಂಡವನ್ನು ಘೋಷಿಸಿ ಜಂತರ್ ಮಂತರ್‌ನ 36 ದಿನಗಳ ಪ್ರತಿಭಟನೆಯ ಬಳಿಕ 'ಕಾಕ್ರೋಚ್ ಜನಪಾ ಪಾರ್ಟಿ' (ಸಿಜೆಪಿ) ಸಂಘಟನೆ ವಿಸ್ತರಣೆಗೆ ಮುಂದಾಗಿದೆ. ಪತ್ರಿಕೋದ್ಯಮ, ತಂತ್ರಜ್ಞಾನ, ಕಾನೂನು, ಸಾರ್ವಜನಿಕ ನೀತಿ, ಹಣಕಾಸು ಹಾಗೂ ಉದ್ಯಮ ಕ್ಷೇತ್ರದಲ್ಲಿ ತೊಡಗಿರುವ ಯುವಜನರಿಗೆ ಪ್ರಮುಖ ಹೊಣೆಗಾರಿಕೆ ನೀಡಿದೆ. ಮುಂದಿನ ಆರು ತಿಂಗಳ ಕಾಲ ಸಂಘಟನೆಯನ್ನು ಮುನ್ನಡೆಸಲಿರುವ 12 ಸದಸ್ಯರ ತಂಡವನ್ನು ಘೋಷಿಸಿದೆ.ಮಹಾರಾಷ್ಟದ ಸಂಭಾಜಿ ನಗರದಲ್ಲಿ ಎರಡು ದಿನಗಳ ಸಭೆ ನಡೆಸಿರುವ ಸಿಜೆಪಿ, ತನ್ನ 12 ಮಂದಿ ನಾಯಕತ್ವದ ತಂಡವನ್ನು ಪ್ರಕಟಿಸಿದೆ. ತಂಡದಲ್ಲಿ ಪತ್ರಕರ್ತರು, ಎಂಜಿನಿಯರ್‌ಗಳು, ವಕೀಲರು, ಚಾರ್ಟರ್ಡ್ ಅಕೌಂಟೆಂಟ್‌ಗಳು, ಉದ್ಯಮಿಗಳು ಹಾಗೂ ಹೋಟೆಲ್ ಮ್ಯಾನೇಜ್ಮೆಂಟ್ ಪದವೀಧರರು ಇರುವುದು ವಿಶೇಷವಾಗಿದೆ.ಬೀದಿಯ ಹೋರಾಟಕ್ಕೆ ಮಾತ್ರ ಸೀಮಿತವಾಗದೆ ದೇಶದ ವಿವಿಧ ಭಾಗಗಳಲ್ಲಿ ಯುವಜನರನ್ನು ಸಂಘಟಿಸಿ ತನ್ನ ಚಟುವಟಿಕೆಗಳನ್ನು ವಿಸ್ತರಿಸುವುದು ಸಿಜೆಪಿಯ ಮುಂದಿನ ಗುರಿಯಾಗಿದೆ. ಆದರೆ, ಸಂಘಟನೆಯು ರಾಜಕೀಯ ಪಕ್ಷವಾಗಿ ಪರಿವರ್ತನೆಯಾಗುವ ಯಾವುದೇ ಯೋಜನೆ ಹೊಂದಿಲ್ಲ ಎಂದು ಸಂಘಟನೆ ಮತ್ತೊಮ್ಮೆ ಸ್ಪಷ್ಟಪಡಿಸಿದೆ. ಸಿಜೆಪಿ ನಾಯಕತ್ವದ ವಿವರ ಇಲ್ಲಿದೆಅಭಿಜೀತ್ ದಿಪ್ಕೆ □ ಸಂಸ್ಥಾಪಕ, ರಾಷ್ಟ್ರೀಯ ಸಂಚಾಲಕ,ಅಶುತೋಷ್ ರಾಂಕಾ □ ಸಹ ಸಂಚಾಲಕ,ಸೌರವ್ ದಾಸ್ □ ಸಹ ಸಂಚಾಲಕ,ಅಜಿಂಕ್ಯ ಶಿಂಧೆ □ ರಾಷ್ಟ್ರೀಯ ಸಂಘಟನಾ ಉಸ್ತುವಾರಿ,ದೀಪಕ್ ಬಲಿಯಾನ್ □ ಉತ್ತರ ವಲಯದ ಮುಖ್ಯಸ್ಥ,ಅಫ್ರೀನ್ ನವಾಜ್ □ ರಾಷ್ಟ್ರೀಯ ಕಾರ್ಯದರ್ಶಿ,ವಿಜಯ್ ರೆಡ್ಡಿ ಮಲ್ಲಂಗಿ □ ಮಾಧ್ಯಮ ಮತ್ತು ದಕ್ಷಿಣ ವಲಯ,ರತ್ನಾ ಸಿಂಗ್ □ ಕಾನೂನು ವ್ಯವಹಾರಗಳ ಮುಖ್ಯಸ್ಥೆ,ವೈಷ್ಣವಿ ಗೌರ್ □ ಸಂಶೋಧನೆ ಮತ್ತು ನೀತಿ ವಿಭಾಗ,ರೋಹನ್ ದೇಶಪಾಂಡೆ □ ತಂತ್ರಜ್ಞಾನ ವಿಭಾಗ,ಯೋಗೇಶ್ ಇಂಗಳೆ □ ಹಣಕಾಸು ಮತ್ತು ಪಶ್ಚಿಮ ವಲಯ,ಅಂಕಿತ್ ಭಾರದ್ವಾಜ್ □ ಪೂರ್ವ ಮತ್ತು ಈಶಾನ್ಯ ವಲಯ.




OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101